॥धर्मो रक्षति रक्षितः॥

# HAVYAKA SANDESHA

# ಹವ್ಯಕ ಸಂದೇಶ

A Monthly Newsletter of Havyaka Welfare Trust, Estd. 1964

Vol. XXXI No. 10 | AUGUST 2022 | Pages 16 | Rs. 2/-




Forthcoming event :

**ANNUAL GENERAL BODY MEETING**

On 28th August, 2022 | 9:30 a.m. onwards
at Havyakara Sabhagraha,
Dipti Solitaire, Ghatkopar (W), Mumbai


*PAGE DONATED BY : PROFESSIONAL COURIERS WESTERN & CENTRAL REGION, COURTESY : SHRI RAMESH G. HEGDE, MADAPPAN, KARKI, DADAR T. T.*

"Havyaka Sandesha" is a monthly publication by
**HAVYAKA WELFARE TRUST, Mumbai**
B-207, Valmiki Apartment, Sundar Nagar, Kalina,
Vidyanagari P. O. Mumbai - 400 098 ✆ 2665 2591

**Hon. Editor** : Smt. Amita S. Bhagwat

**Editorial Committee** Smt. Shashikala Hegde, Smt. Tanuja Hegde, Shri Umesh Hegde, Smt. Shailaja Hegde

**Publisher** : Narayan Akadas R., Hon. Gen. Secretary

**Printed at** : M/s. Navin Printers, Mumbai - 400 016. ✆ 2430 8316

**Havyaka Welfare Trust (Estd. 1964) :** is a charitable organisation dedicated to protect, preserve, promote, propagate & perpetuate art, science, Havyaka culture & traditional values among the members. The Trust runs medical centre at Dombivli at concessional rate and is open to all. DONATIONS TO 'HAVYAKA WELFARE TRUST' QUALIFY FOR TAX DEDUCTION UNDER SECTION 80 (G).

**Membership of Havyaka Welfare Trust :**
Patron (PT) Rs. 5010/-, Benefactor (BN)Rs.3010/-, Sustaining Life Member (SL) Rs. 2010/-, Life Member (LM) Rs. 510/-, Patron Foreign Member US $ 150/-. Prescribed membership forms duly filled and sent with cash / local cheques for Greater Mumbai and DD for outsiders will be accepted.Cheque & DD shall be drawn in favour of "Havyaka Welfare Trust".

**Havyaka Sandesha Advertisement Tariff :**
¼ Page B/W Rs. 5000/- annum Rs. 500/- one time.
¼ Page Colour 15,000/- annum Rs. 1500/- one time.
½ Page B/W Rs. 10,000/- annum Rs. 1,000/- one time
½ Page Colour Rs. 30,000/- per annum & 3,000/-one time.
Full Page B/W Rs.15,000/- annum Rs. 2,000/- one time
Full Page Colour Rs. 45,000/- annum & Rs. 5,000/- one time.
Matrimonial Rs. 500/- per Issue
Page Sponsorship Rs. 5000/- per annum

***Publication :*** Authors are requested to send the materials in English / Kannada written or typed on one side of the page directly to Havyaka office addressed to the Editor "Havyaka Sandesha" or by e-mail. Topics published need not necessarily reflect the views of Havyaka Welfare Trust. Authors are solely responsible for Articles published under their name in the Havyaka Sandesha. Right to edit the material and publish rests with the Editorial Committee.

***Change of Address :*** Members are requested to intimate the office in writing or through e-mail with their Membership No.

**Managing Committee for the year 2019-2020**

| | | |
|---|---|---|
| *President* | : | Shivkumar P. Bhagwat |
| *Vice - President* | : | Sanjay Bhat |
| *Hon. Gen. Secretary* | : | Narayan Akadas |
| *Hon. Jt. Secretary* | : | Umesh Hegde |
| *Hon. Treasurer* | : | A. G. Bhat |

***Elected Members :***

| | |
|---|---|
| Smt. Tanuja Hegde | A. K. Bhat |
| Smt. Shashikala Hegde | R. N. Kameshwar |
| N. K. Hegde | Ramesh Vaidya |
| Gautam Upadhya | Chidanand Bhagwat |

***Co-opted Members :***
Umesh Maskeri, Shailaja Hegde

*ಸಂಪಾದಕೀಯ*

# ಸಮತೋಲನ



“ಬಾಯಿಗೆ ಹಾಕಿಕೊಂಡ ಬಿಸಿ ತುಪ್ಪದಂತೆ ಅತ್ತ ನುಂಗಲು ಕಷ್ಟ, ಇತ್ತ ಉಗುಳಲೂ ಇಷ್ಟವಿಲ್ಲ.” ಉಭಯ ಪೇಚಿನಲ್ಲಿ ಸಿಲುಕಿಕೊಂಡ ಸಂದರ್ಭದಲ್ಲಿ ಈ ನಾಣ್ನುಡಿಯ ಬಳಕೆ ಸರ್ವೇಸಾಧಾರಣವಾದದ್ದು. ತುಪ್ಪವೆಂದರೆ ಒಂದು ರುಚಿಕರವಾದ ಪದಾರ್ಥ. ಆದರೆ ಅದನ್ನು ತಯಾರಿಸುವ ಪ್ರಕ್ರಿಯೆ ಸುಲಭವಾದದ್ದಲ್ಲ. ಹಾಲನ್ನು ಬಿಸಿಮಾಡಿ, ತಣಿಸಿ, ಅದಕ್ಕೆ ಹದವಾಗಿ ಹೆಪ್ಪು ಹಾಕಿ ಮೊಸರಾಗುವ ತನಕ ಕಾಯಬೇಕು. ಮೊಸರನ್ನು ಕಡೆದು ಬೆಣ್ಣೆ ತೆಗೆದು, ಅದನ್ನು ಚೊಕ್ಕವಾಗಿ ತೊಳೆದು ಕಾಳಜಿಯಿಂದ ಕಾಯಿಸಬೇಕು.

ಇಷ್ಟೆಲ್ಲ ಹಂತಗಳನ್ನು ಹಾದುಬರುವ ತುಪ್ಪದ ಬೆಲೆ ಸಹಜವಾಗಿಯೇ ಎಲ್ಲ ನಿಟ್ಟಿನಿಂದಲೂ ಹೆಚ್ಚು. ಅಲ್ಲದೇ, ಅದರ ಬಳಕೆಯ ಕ್ಷೇತ್ರ ಕೂಡ ಉನ್ನತಮಟ್ಟದ್ದು. ಇಂತಹ ಬೆಲೆಬಾಳುವ ತುಪ್ಪವನ್ನು ಬಿಸಿಯಾಗಿದೆಯೋ ಅಥವಾ ತಣ್ಣಗಿದೆಯೋ ಎಂದು ಪರೀಕ್ಷಿಸದೆ ಬಾಯಿಗೆ ಹಾಕಿಕೊಂಡರೆ ಇಕ್ಕಟ್ಟಿನ ಪರಿಸ್ಥಿತಿ. ನುಂಗಿದರೆ ಗಂಟಲು ಸುಡುತ್ತದೆ, ಉಗುಳಿದರೆ ಅಮೂಲ್ಯವಾದ ಆಹಾರ ಪದಾರ್ಥವನ್ನು ಹಾಳುಮಾಡುವ ಬೇಸರ. ಆದರೆ ಸ್ವಲ್ಪ ಮುಂಜಾಗರೂಕತೆ ವಹಿಸಿದರೆ ಪೇಚಿಗೆ ಸಿಕ್ಕಿಕೊಳ್ಳುವ ಸಂದರ್ಭ ಎದುರಾಗುವುದಿಲ್ಲ.

ನಮ್ಮ ಜೀವನದಲ್ಲಿಯೂ ಕೂಡ ಯಾವುದೇ ಕೆಲಸ ಕೈಗೆತ್ತಿಕೊಳ್ಳುವ ಮುನ್ನ, ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಮೊದಲು ಆ ವಿಷಯದ ಕುರಿತು ಪರಾಮರ್ಶೆ ನಡೆಸಿ ಕಾರ್ಯಪ್ರವೃತ್ತರಾದರೆ ಮುಂದಿನ ದಾರಿ ಸುಗಮ. ಬದುಕಿನಲ್ಲಿ ನಮ್ಮೊಂದಿಗಿರುವ ಸಂಬಂಧಗಳು ಕೂಡ ಬಿಸಿ ತುಪ್ಪದಂತೆ. ಸಂಭಾಳಿಸಿಕೊಳ್ಳುವ ಭರದಲ್ಲಿ ಮೌನವಾಗಿದ್ದು ನೋವು ಅನುಭವಿಸುತ್ತೇವೆಯೇ ಹೊರತು ಅಭಿಪ್ರಾಯಗಳನ್ನು ನೇರವಾಗಿ ವ್ಯಕ್ತಪಡಿಸುವ ಗೊಡವೆಗೆ ಹೋಗುವುದಿಲ್ಲ. ಯಾಕೆಂದರೆ ಒಮ್ಮೆ ಘಾಸಿಗೊಂಡ ಸಂಬಂಧದ ಎಳೆಗಳನ್ನು ಮತ್ತೆ ಜೋಡಿಸುವುದು ಕಷ್ಟ ಎನ್ನುವ ವಿಚಾರಗಳ ತಾಕಲಾಟ ಮನದಲ್ಲಿ ಸದಾ ಜಾಗೃತವಾಗಿರುತ್ತದೆ. ಹೀಗಾಗಿ ಎಲ್ಲರೊಡನೆ ಬೆಣ್ಣೆಯಂತಹ ಮೃದು ಮಾತುಗಳನಾಡುತ್ತ, ಭಾವನೆಗಳನ್ನು ಬಿಸಿತುಪ್ಪದಂತೆ ನುಂಗಿಕೊಂಡು ನಂಜುಂಡೇಶ್ವರನಾಗಬೇಕಾದ ಪರಿಸ್ಥಿತಿ.

ನಮ್ಮ ಬುದ್ಧಿ ಬಲಿಯುವ ಮೊದಲಿನ ಮೂರ್ನಾಲ್ಕು ವರ್ಷಗಳು ಅಂದರೆ ಬಾಲ್ಯದ ದಿನಗಳು ಮಾತ್ರ ಯಾವ ಜಂಜಾಟವೂ ಇಲ್ಲದೆ ಕಳೆಯುವ ಮಧುರ ಕ್ಷಣಗಳು. ಒಮ್ಮೆ ವಿಚಾರಶಕ್ತಿ ಬಲಿಯಲು ಪ್ರಾರಂಭವಾಯಿತೆಂದರೆ ನಂತರದ ಜೀವನ ಹಗ್ಗದ ಮೇಲಿನ ನಡಿಗೆಯಂತೆ. ಸಮತೋಲನ ಕಾಯ್ದುಕೊಳ್ಳಲು ಪರದಾಟ. ಸ್ವಲ್ಪ ಏರುಪೇರಾದರೆ ಬೀಳುವ ಭಯ.

ವಿಚಾರಯುತ ಮನದಿಂದ ನಿರ್ಧಾರ ತೆಗೆದುಕೊಳ್ಳುವ ಸಂಯಮ, ವ್ಯವಧಾನ ಎಲ್ಲರದ್ದಾಗಲಿ. ಉಭಯ ಪೇಚಿನಿಂದ ಬಿಡುಗಡೆ ಪಡೆದ ಸ್ವತಂತ್ರ ಬಾಳ್ವೆ ಪ್ರತಿಯೊಬ್ಬರ ಪಾಲಿಗಿರಲಿ.

***ಎಲ್ಲರಿಗೂ ಜನ್ಮಾಷ್ಟಮಿ ಹಾಗೂ ಗಣೇಶ ಚತುರ್ಥಿಯ ಶುಭಾಶಯಗಳು***

**– ಶಶಿಕಲಾ ಹೆಗಡೆ**

*PAGE DONATED BY : **SHRI SADANANDA HEGDEKATTE MOODABIDIRE & FAMILY IN THE MEMORY OF HIS FATHER LATE V. V. HEGDEKATTE***

# ಮಾಸ ಮಹಾತ್ಮ್ಯೆ

✍ ಗಣಪತಿ ಭಟ್ಟ

*(ಕಳೆದ ಸಂಚಿಕೆಯಿಂದ)*

**ಶ್ರಾವಣ**

ಸರ್ಪಗಳನ್ನು ದೇವರಂತೆ ಭಾವಿಸಿ ಪೂಜಿಸುವ ಪದ್ಧತಿಯು ಬಹು ಪ್ರಾಚೀನ ಕಾಲದಲ್ಲಿತ್ತೆಂಬದು ಕಂಡು ಬರುತ್ತದೆ. ಯಜುರ್ವೇದದಲ್ಲಿ ಸರ್ಪಗಳ ಪ್ರೀತ್ಯರ್ಥವಾಗಿ ಅನ್ನುವ ಮಂತ್ರಗಳಿವೆ. ಈ ಸರ್ಪಗಳ ರಾಜ್ಯವು ಪಾತಾಳ ಲೋಕವೆಂತಲೂ, ಮಹಾಶೇಷನೇ ಇವುಗಳ ರಾಜನೆಂತಲೂ, ಇವನಿಗೆ ಸಾವಿರ ಫಣಗಳಿದ್ದು ಅವುಗಳ ಮೇಲೆ ಈ ಪೃಥ್ವಿಯಿರುವುದೆಂತಲೂ ಪುರಾಣಗಳಲ್ಲಿವೆ. ಸರ್ಪಗಳಿಗೆ ಏನಾದರೂ ಅಪಾಯ ಮಾಡಿದರೆ ಅವು ಆ ದ್ವೇಷವನ್ನು ಆಮರಣಾಂತ ಮರೆಯವೆಂದು ಹೇಳುತ್ತಾರೆ. ಈ ಅಪಾಯದಿಂದ ಅವು ಕೊಡುವ ಶಾಪವು ಜನ್ಮಜನ್ಮಾಂತರಗಳಲ್ಲಿ ಸಹ ಪೀಡಿಸುವುದೆಂತಲೂ, ಈ ಶಾಪ ಪರಿಹಾರಕ್ಕಾಗಿ ಸರ್ಪಸಂಸ್ಕಾರವೆಂಬ ವಿಧಿಯನ್ನು ಆಚರಿಸಬೇಕೆಂತಲೂ ಹೇಳಿದೆ. ಜಗದ್ರಕ್ಷಕ ಶ್ರೀವಿಷ್ಣುವು ಶೇಷನ ಮೇಲೆ ಮಲಗಿರುವನೆಂತಲೂ, ಶ್ರೀಶಂಕರನು ಸರ್ಪಗಳನ್ನು ಆಭರಣವಾಗಿಟ್ಟುಕೊಂಡಿರುವನೆಂತಲೂ, ಶ್ರೀಗಣಪತಿಯು ಸರ್ಪವನ್ನು ಹೊಟ್ಟೆಗೆ ಸುತ್ತಿರುವನೆಂತಲೂ ಪುರಾಣಗಳು ಹೇಳುತ್ತವೆ. ಲಕ್ಷ್ಮಣ, ಬಲರಾಮರು ಶೇಷನ ಅವತಾರವೆಂದೂ ವರ್ಣನೆಯಿದೆ. ಸುಬ್ರಹ್ಮಣ್ಯ, ಅನಂತಶಯನ ಮುಂತಾದ ಕ್ಷೇತ್ರಸ್ಥಳಗಳಲ್ಲಿ ಸರ್ಪಗಳ ಪ್ರೀತ್ಯರ್ಥವಾಗಿ ನಾಗಬಲಿ, ಸರ್ಪಸಂಸ್ಕಾರಗಳು ಆಚರಿಸಲ್ಪಡುತ್ತವೆ.

ಸರ್ಪಗಳ ಕಡಿತದಿಂದ ಮನುಷ್ಯನು ಸಾಯುತ್ತಾನಾದ್ದರಿಂದ ಇವು ಮನುಷ್ಯನಿಗೆ ವೈರಿಗಳಂತೆ ಅವೆ. ಇದೇ ಭಾವನೆಯಿಂದ ಕ್ರೈಸ್ತ, ಮುಸಲ್ಮಾನೀ ಧರ್ಮಗಳು ಸರ್ಪಕ್ಕೆ ಸೈತಾನನೆಂದು ಸಂಬೋಧಿಸುತ್ತವೆ. ಆದರೆ ಸೃಷ್ಟಿಕರ್ತನ ಅಗಾಧ ಲೀಲೆಯಲ್ಲಿ ಪೂಜ್ಯಭಾವವುಳ್ಳ ಹಿಂದೂಧರ್ಮವು ಅವನ ಸೃಷ್ಟಿಯ ಸ್ಥಿರಚರಗಳಲ್ಲೆಲ್ಲ ಪರಮೇಶ್ವರನು ವ್ಯಾಪಿಸಿರುವದರಿಂದ ದುಷ್ಟವಾದವುಗಳನ್ನಾದರೂ ಸುಷ್ಟವಾದವುಗಳಂತೆ ಪೂಜ್ಯಭಾವನೆಯಿಂದ ಸೇವಿಸಿ ಸಂತುಷ್ಟಪಡಿಸುವ ಉದಾತ್ತ ಭಾವನೆಯನ್ನು ವಹಿಸಿದ್ದು ಇದರಿಂದ ಸ್ಪಷ್ಟವಾಗುತ್ತದೆ.

**ಮಂಗಲಾಗೌರಿಯ ವ್ರತ :–** ಇದನ್ನು ವಿವಾಹಿತ ಹುಡುಗಿಯರು ಸ್ಥಿರ ಸೌಭಾಗ್ಯ ಪ್ರಾಪ್ತ್ಯರ್ಥವಾಗಿಯೂ, ಪುತ್ರ ಪೌತ್ರ ಸಂಪದಭಿವೃದ್ಧಿಗಾಗಿಯೂ ಲಗ್ನವಾದ ಮೊದಲನೇ ವರ್ಷದ ಶ್ರಾವಣಮಾಸದಲ್ಲಿ ಪ್ರಾರಂಭಿಸಿ ಐದು ವರ್ಷ ಆಚರಿಸತಕ್ಕದ್ದು. ಮೊದಲನೇ ವರ್ಷ ತಂದೆಯ ಮನೆಯಲ್ಲಿಯೂ ಮುಂದಿನ ನಾಲ್ಕು ವರ್ಷ ಗಂಡನ ಮನೆಯಲ್ಲಿಯೂ ಮಾಡಬೇಕು. ಐದನೇ ವರ್ಷ ಉದ್ಯಾಪನ ಮಾಡತಕ್ಕದ್ದು. ಮಂಗಲಾಗೌರಿಯ ಪ್ರತಿಮೆಯನ್ನು ಅಕ್ಕಿ ತುಂಬಿದ ಕಲಶದ ಮೇಲಿಟ್ಟು ಪೂಜಿಸುವುದು. ಹದಿನಾರು ಪ್ರಕಾರದ ಪುಷ್ಪಗಳನ್ನರ್ಪಿಸಬೇಕು. ಹಿಟ್ಟಿನ ಹದಿನಾರು ಪಣತಿಗಳಲ್ಲಿ ಹದಿನಾರು ದೀಪಗಳಿಂದ ಆರತಿ ಮಾಡತಕ್ಕದ್ದು. (ಈ ಪ್ರಕಾರ ಹದಿನಾರರ ಮಹತ್ವವು ಹೆಚ್ಚಾಗಿದೆ.) ಹದಿನಾರು ಸುವಾಸಿನಿಯರಿಗೆ ವಾಯನ ಭೋಜನಾದಿಗಳನ್ನು ಕೊಡತಕ್ಕದ್ದು. ರಾತ್ರಿ ಜಾಗರಣ ಮಾಡಿ ಮರು ದಿನ ಗೌರೀಪೂಜೆಯನ್ನು ಮಾಡಿ ವಿಸರ್ಜನೆ ಮಾಡತಕ್ಕದ್ದು.

ಈ ವ್ರತದ ಸಂಬಂಧದ ಕಥೆಯು ವ್ರತಚೂಡಾಮಣಿ, ವ್ರತರಾಜಗಳಲ್ಲಿ- 'ಕುಂಡಿನವೆಂಬ ಪಟ್ಟಣದಲ್ಲಿ ಧರ್ಮಪಾಲನೆಂಬವನೊಬ್ಬ ವೈಶ್ಯನಿದ್ದನು. ಸಪತ್ನೀಕನಾಗಿ ಧನವಂತನಾಗಿದ್ದರೂ ಮಕ್ಕಳಿಲ್ಲದವನಾಗಿದ್ದನು. ಜಟಾಧಾರಿಯಾದ ಒಬ್ಬ ಯೋಗಿಶ್ರೇಷ್ಠನು ಅವನ ಮನೆಯ ಸಮೀಪಕ್ಕೆ ಬಂದರೂ ಅವನಲ್ಲಿ ಭಿಕ್ಷೆಯನ್ನು ತಕ್ಕೊಳ್ಳುತ್ತಿದ್ದಿಲ್ಲ. ಈ ವೃತ್ತಾಂತವನ್ನು ಧರ್ಮಪಾಲನ ಹೆಂಡತಿಯು ಧರ್ಮಪಾಲನಿಗೆ ತಿಳಿಸಲು ಅವನು ವೇಷ



ಬದಲಾಯಿಸಿಕೊಂಡು ಆ ಯತಿಗೆ ಸುವರ್ಣವನ್ನು ಕೊಡಲು ಹೇಳಿದನು. ಅವಳು ಅದರಂತೆ ಮಾಡಲು ಆ ಯತಿಯು ಸಿಟ್ಟಾಗಿ ನಿಸ್ಸಂತಾನವಾಗುವಂತೆ ಶಾಪವಿತ್ತನು. ಇದನ್ನು ಕೇಳಿ ಆ ಸಾಧ್ವಿಯು ಭಯವಿಹ್ವಲಳಾಗಿ ಕ್ಷಮೆಯನ್ನು ಬೇಡಲು ಯತಿಯು:- 'ನಿನ್ನ ಗಂಡನು ನೀಲವಸ್ತ್ರವನ್ನು ಧರಿಸಿ ನೀಲಾಶ್ವದ ಮೇಲೇರಿ ವನಕ್ಕೆ ಹೋಗತಕ್ಕದ್ದು. ಮಾರ್ಗಮಧ್ಯದಲ್ಲಿ ಕುದುರೆಯು ಎಲ್ಲಿ ನಿಲ್ಲುವದೋ ಅಲ್ಲೇ ಭೂಮಿಯನ್ನಗೆಯಲು ಒಂದು ದೇವಿಯ ದೇವಾಲಯವು ಬರುವದು. ಆ ದೇವಿಯ ಪ್ರಸನ್ನತೆಯಿಂದ ಸಂತತಿಯಾಗುವದು.' ಎಂದು ಹೇಳಿ ಹೊರಟು ಹೋದನು. ಇದರಂತೆ ಮಾಡಲು ದೇವಿಯ ದೇವಾಲಯವು ಪ್ರಾಪ್ತವಾಯಿತು. ಆ ದೇವಿಯನ್ನು ಪ್ರಾರ್ಥಿಸಲು ದೇವಿಯು ದೀರ್ಘಾಯುಷಿಯಾದ ಮಗನು ಬೇಕಾದರೆ ಕುರುಡನು ಹುಟ್ಟುವನು, ಹದಿನಾರು ವರ್ಷದ ಆಯುಷ್ಯದವನಾದರೆ ಸುರೂಪಿಯೂ, ಸುಗುಣಿಯೂ ಜನಿಸುವನು; ಯಾವದು ಬೇಕೆಂದು ಕೇಳಲು ಅಲ್ಪಾಯುಷಿಯಾದರೂ ಸುರೂಪಿಯಾದ ಸುಗುಣಿ ಮಗನೇ ಬೇಕೆಂದು ಧರ್ಮಪಾಲನು ಬೇಡಿಕೊಂಡನು. ಮುಂದೆ ದೇವಿಯು ತನ್ನ ದೇವಾಲಯದ ಬಳಿಯಲ್ಲಿರುವ ಮಾವಿನ ಮರದಿಂದ ಒಂದು ಹಣ್ಣನ್ನು ಕೊಯ್ದು ತಕ್ಕೊಂಡು ಹೋಗಿ ಹೆಂಡತಿಗೆ ಕೊಡುವಂತೆ ಆಜ್ಞಾಪಿಸಿ ಅಂತರ್ಧಾನಳಾದಳು. ಅದರಂತೆ ಮಾಡಲು ಧರ್ಮಪಾಲನ ಹೆಂಡತಿಯು ಗರ್ಭಿಣಿಯಾಗಿ ಸುರೂಪಿಯಾದ ಮಗನನ್ನು ಹಡೆದಳು. ಈ ಹುಡುಗನಿಗೆ ಹದಿನಾರನೇ ವರ್ಷವು ತುಂಬುತ್ತಾ ಬರಲು ಅವನ ಮರಣವನ್ನು ನೋಡಲಾರೆವೆಂದು ಅವನ ಮಾವನ ಸಂಗಡ ಆ ಶಿವನೆಂಬ ಹುಡುಗನನ್ನು ಕಾಶಿಗೆ ಕಳಿಸಿದರು. ಅವರಿಬ್ಬರು ಬರುತ್ತಾ ಮಾರ್ಗದಲ್ಲಿ ಒಂದು ಉಪವನವನ್ನು ಪ್ರವೇಶಿಸಿ ಕುಳಿತಿರಲು ಅಲ್ಲಿ ಕೆಲವು ಹುಡುಗಿಯರು ಆಡುತ್ತಿರುವಾಗ ಅವರಲ್ಲಿ ವಿವಾದವಾಗಿ ಒಬ್ಬಳು ಮತ್ತೊಬ್ಬಳಿಗೆ ರಂಡೆ ಎಂದು ಬೈದಳು. ಈ ಅಪಶಬ್ದವನ್ನು ಅನ್ನಿಸಿಕೊಂಡ ಸುಶೀಲೆಯೆಂಬವಳು-'ಇದರಿಂದ ನನಗೇನೂ ಆಗುವಂತಿಲ್ಲ. ಯಾಕೆಂದರೆ ನನ್ನ ತಾಯಿಯು ಮಂಗಲಾಗೌರೀ ವ್ರತವನ್ನಾಚರಿಸುವುದರಿಂದ ಸ್ಥಿರ ಸೌಭಾಗ್ಯವೇ ಪ್ರಾಪ್ತವಾಗುವುದು.' ಎಂದು ಹೇಳಿದ್ದನ್ನು ಕೇಳಿ ಇವಳು ಶಿವನ ಹೆಂಡತಿಯಾಗಿದ್ದರೆ ನೆಟ್ಟಗಾಗುತ್ತಿತ್ತೆಂದು ಆ ಮಾವನು ಆಲೋಚಿಸಿ ಅವಳ ಹಿಂದೆಯೇ ಹೋಗಿ ಆ ಮನೆಯನ್ನು ತಿಳುಕೊಂಡು ಅಲ್ಲೇ ಸಮೀಪದಲ್ಲೇ ಬಿಡಾರ ಮಾಡಿದನು. ಕೆಲವು ಕಾಲದ ಮೇಲೆ ಸುಶೀಲೆಯ ತಂದೆಯಾದ ಹರಿಯು ಅಲ್ಲೇ ಸಮೀಪದಲ್ಲಿರುವ ಶಿವದೇವಾಲಯಕ್ಕೆ ಹೋಗಿ ತನ್ನ ಮಗಳಿಗೆ ತಕ್ಕ ವರನು ಯಾರೆಂದು ತಿಳಿಸಬೇಕಾಗಿ ದೇವರಲ್ಲಿ ಪ್ರಾರ್ಥಿಸಿದನು. ಇದನ್ನು ತಿಳಿದು ಶಿವನೆಂಬ ಹುಡುಗನ ಮಾವನು ಆ ಮೂರ್ತಿಯ ಹಿಂದೆ ನಿಂತು ಶಿವನೇ ತಕ್ಕವನೆಂದು ಉತ್ತರವಿತ್ತನು. ಇದರಂತೆ ವಿವಾಹವಾಯಿತು. ರಾತ್ರಿ ದೇವಿಯು ಸುಶೀಲೆಯ ಸ್ವಪ್ನದಲ್ಲಿ ಕಾಣಿಸಿಕೊಂಡು 'ನಿನ್ನ ಗಂಡನನ್ನು ಕಡಿಯುವುದಕ್ಕಾಗಿ ಒಂದು ಸರ್ಪವು ಬರುವುದು. ಅದರ ಮುಂದೆ ಒಂದು

*(5ನೇ ಪುಟಕ್ಕೆ)*

*PAGE DONATED BY : **HEGDE HOSPITAL, CHEMBUR,** COURTESY : **DR. DINESH HEGDE***

# ಕಾಳಿದಾಸನನ್ನು ಕನ್ನಡಕ್ಕಿಳಿಸಿದ ಕನ್ನಡ ಕಣ್ಮಣಿಗಳು

✍ ಶೈಲಜಾ ಹೆಗಡೆ, ಮುಂಬಯಿ

*(ಹಿಂದಿನ ಸಂಚಿಕೆಯಿಂದ ಮುಂದುವರಿದ ಭಾಗ)*

**ಮೇಘಸಂದೇಶ : ಅಗ್ರಹಾರ ನಾ. ಶರ್ಮಾ :**

ಅಗ್ರಹಾರ ನಾ. ಶರ್ಮಾ ಅವರ ಮೇಘ ಸಂದೇಶ ಕಾವ್ಯವು 148 ಪದ್ಯಗಳನ್ನು ಒಳಗೊಂಡಿದೆ. ಇದು ಸ್ವಾತಂತ್ರ್ಯ ಪೂರ್ವದಲ್ಲಿಯೇ 1946ನೆಯ ಇಸ್ವಿಯಲ್ಲಿ ಪ್ರಕಟವಾಯಿತು. ಕಾವ್ಯವು ವಾರ್ಧಕ ಷಟ್ಪದಿಯಲ್ಲಿದ್ದು ಆದಿಪ್ರಾಸಯುಕ್ತವಾಗಿದೆ. ಮೂಲಕಾವ್ಯದಲ್ಲಿ ಅಲಭ್ಯವಾದ ಪೂರ್ವ ಕಥೆಯನ್ನು ಕಾವ್ಯಾದಿಯಲ್ಲಿ ಯೋಜಿಸಿರುವುದು ಇವರ ಕಾವ್ಯದ ವೈಶಿಷ್ಟ್ಯವಾಗಿದೆ. ಶ್ರೀಹರಿಯ ಸ್ತುತಿಯೊಂದಿಗೆ ಕಾವ್ಯ ಪ್ರಾರಂಭವಾಗುತ್ತದೆ.

ಶ್ರೀಕಮಲಮಾರಿಂದೆ ಜನಿಸಿತೋ, ಭೂತಳವ
ನೇಕ ಕ್ರಮದಿ ಲೀಲೆಯಿಂ ರಚಿಸಿ ತಿಳಿವಂತೆ
ನಾಕಗಳ ನರಕಗಳ ತೋರುತ್ತಲಿಹನಾವನೋ,
ಮಹನವನು ಬಯಸುತ
ಬೇಕಾದ ತೆರನಂತೊಗುವ ಸಾರತರ ವೇದ
ದಾಕಾರವನು ಮಾನವಗೆನುತೆ ಪೇಳ್ದುದಾ,
ಸಾಕಾರ ಕರ್ಮಗಳ ಪೇಳ್ದನೀನತುಳ ಘನನಲಾ,
ಹರಿ ಯೆಸಗು ಮುದವ

'ಲಕ್ಷ್ಮಿಯು ಯಾರಿಂದ ಜನಿಸಿದಳೋ; ಭೂಮಿ, ಸ್ವರ್ಗ ಮತ್ತು ನರಕಗಳನ್ನು ತನ್ನ ಲೀಲೆಯಿಂದ ಸೃಷ್ಟಿಸಿ, ಸಕಲ ವೇದಗಳ ಸಾರವನ್ನು ಮಾನವಕೋಟಿಗೆ ಯಾರು ನೀಡಿದರೋ, ಸಾಕಾರ ಮತ್ತು ಕರ್ಮಗಳ ಜ್ಞಾನ ಯಾರಿಂದ ಬೋಧನೆಯಾಯಿತೋ, ಅಂತಹ ಶ್ರೀಹರಿ ನಮಗೆ ಸಂತಸವನ್ನು ತರಲಿ' ಎಂದು ಕವಿ ಪ್ರಾರ್ಥಿಸಿಕೊಂಡಿದ್ದಾರೆ.

ಪುರುಷಸೂಕ್ತಾದಿ ಮಂತ್ರಂಗಳಿಂ ಪೂಜಿಸುತ ಪರಿಮಳವ ಭರಿಸಿಪ್ಪ ಪುಷ್ಪಗಳ ತೊಟ್ಟೊಡನೆ ಕಿರುದುಂಬಿ ಭೋರೆದ್ದು ಕಿರುಬೆರಳ ಕಚ್ಚಲಾ ಭೂವರಂ ಕೋಪದಿಂದ

ಯಕ್ಷ ತನ್ನ ದಿನನಿತ್ಯದ ಕೈಂಕರ್ಯದಂತೆ, ಕುಬೇರ ನಡೆಸುವ ಪೂಜೆಗೆ ಸರಿಯಾಗಿ, ಹೂವುಗಳನ್ನು ಸಂಗ್ರಹಿಸಿ ತರಲು, ಅದರೊಳಗೆ ಅವಿತಿರುವ ಕಿರುದುಂಬಿ ಕುಬೇರನ ಕೈಬೆರಳನ್ನು ಕಚ್ಚಲು ಆತನ ಮುನಿಸಿನಿಂದ ಯಕ್ಷ ಶಾಪಗ್ರಸ್ತನಾಗುತ್ತಾನೆ ಎಂಬ ಪೂರ್ವಕಥೆಯನ್ನು ಇಲ್ಲಿ ಜೋಡಿಸಲಾಗಿದೆ. 'ಪುರುಷಸೂಕ್ತಾದಿ ಮಂತ್ರಂಗಳಿಂ' ಎನ್ನುವುದು ಕೂಡ ಕವಿ ಕಲ್ಪನಾಚಾತುರ್ಯದ ಕುರುಹೇ ಆಗಿದೆ.

ಅಂತೆಯೇ, ಯಕ್ಷ ನೆಲೆಸಿದ್ದ ರಾಮಗಿರಿಯ ವರ್ಣನೆಯನ್ನು ಕವಿ ಸುಂದರವಾಗಿ ಚಿತ್ರಿಸಿದ್ದಾರೆ.

ಗರಿದೆನೆಯ ಸಾಲಿಂದೆ, ಹೆಮ್ಮರನ ಬಗ್ಗಿಂದೆ,
ಪಿರಿಗುಹೆಯ ಬಾಯಿಂದೆ, ಪಾಷಾಣದೊಟ್ಟಿಂದೆ,
ಮರಿಗಿರಿಯ ದಳದಿಂದೆ, ಕಿರಿಗಿಡದ ಪೊದೆಯಿಂದೆ,
ಬಲುನುಡಿಯ ಗಿಳಿಗಳಿಂದ
ನೆರೆದಿರುವ ಸರಸಿಂದೆ, ಕೊರಗುತಿಹ ಸರಳಿಂದೆ,
ಮರಿವಾಯು ಸುಳಿವಿಂದೆ, ಮರಗಿಡದ ಒಲವಿಂದೆ,
ಮೊರೆ ಮೊರೆವ ನದಿಯಿಂದೆ, ಪಲ್ಲವಿತ ಮರದಿಂದೆ, ಬಲು
ಚೆಲುವಿನಂದದಿಂದ-



ಹೀಗೆ ಹಲವು ಪದ್ಯಗಳ ಮೂಲಕ ಕವಿ ರಾಮಗಿರಿಯನ್ನು ಬಣ್ಣಿಸಿದ್ದಾರೆ. ಇಲ್ಲಿ ಪ್ರಾಸಾನುಪ್ರಾಸದ ಸೊಬಗನ್ನೂ ಕಾಣಬಹುದು. ಅಂತೆಯೇ, ಯಕ್ಷನು ಉತ್ತರದಿಕ್ಕಿಗೆ ಹರಿಯುತ್ತಿರುವ ಮೋಡವನ್ನು ಕಂಡು ಸಂಭಾಷಿಸುವ ಸಂದರ್ಭದ ಪದ್ಯಗಳಲ್ಲಿ ಅಗ್ರಹಾರ ಶರ್ಮಾ ಅವರು ಸ್ನೇಹದ ಮಹತ್ವವನ್ನು ತಿಳಿಸಿಕೊಟ್ಟಿದ್ದಾರೆ. ಕಾವ್ಯದುದ್ದಕ್ಕೂ ಕವಿ ಪದ್ಯದಿಂದ ಪದ್ಯಕ್ಕೆ ಕೊಂಡಿಯನ್ನು ಬೆಸೆಯುತ್ತ, ಮಾತ್ರೆಗಳ ಜೋಡಣೆಯನ್ನೂ ಅಖಂಡವಾಗಿ ಹೆಣೆದಿರುವುದು ಗೋಚರಿಸುತ್ತದೆ. ಯಕ್ಷನ ತನ್ನ ಪ್ರೇಯಸಿಗೆ ಸಂದೇಶವನ್ನು ತಲುಪಿಸಬೇಕೆಂಬ ಕೋರಿಕೆಯ ಸಂಭಾಷಣೆಯಲ್ಲೂ, ಮೂಲಕಾವ್ಯಕ್ಕೆ ವ್ಯತಿರಿಕ್ತವಾದ ಕೆಲವು ಬದಲಾವಣೆಗಳು ಕಂಡುಬರುತ್ತವೆ. ಅತ್ಯಂತ ಕಷ್ಟಕರವಾದ ದುಃಖಾಗ್ನಿಯಲ್ಲಿ ಬೆಂದು ನರಳುತ್ತಿರುವ ತನ್ನ ಪ್ರಿಯೆಗೆ, ತಾನು ಸೊರಗಿ ಅಸ್ಥಿಯಂತಾಗಿರುವ ವಿಚಾರವನ್ನು ಹೇಳಬೇಡ. ಒಂದು ವೇಳೆ ಹಾಗೆ ಹೇಳಿದೆಯಾದರೆ, ಅದು ಉರಿಯುತ್ತಿರುವ ಅಗ್ನಿಗೆ ತುಪ್ಪವನ್ನು ಹಾಕಿದಂತಾಗುತ್ತದೆಯೆಂದು ಶರ್ಮಾ ಅವರ ಕಾವ್ಯದ ಯಕ್ಷ, ಮೋಡದೊಡನೆ ಕೇಳಿಕೊಳ್ಳುತ್ತಾನೆ. ಕಾಳಿದಾಸನ ಮೇಘದೂತ ಕಾವ್ಯದಲ್ಲಿ ಈ ವಿಷಯದ ಕುರಿತ ಯಾವುದೇ ಸ್ಪಷ್ಟೀಕರಣ ಲಭ್ಯವಿಲ್ಲ. ವಾಸ್ತವಾಂಶವನ್ನು ನೀನು ಹೇಳಿದರೆ, ಅದು ವಿರಸಕ್ಕೆ ಕಾರಣವಾಗಬಹುದೆಂದು ಅರುಹುವ ಆ ಪದ್ಯ ಇಂತಿದೆ.

ವಿಸ್ಮಯಾಹ್ಲಾದ ಮುಖಮುದ್ರೆಯಿಂ ವಿಷಯವಂ
ವಿಸ್ಮಯದಿ ಕೇಳ್ದೊಡಾನಿಪ್ಪ ನಿಜರೀತಿಯಂ
ವಾಸ್ತವಾಂಶವನು ಪೇಳಲೆನುತಾಲೋಚಿಸುವೆ;
ನೀನೊರೆಯೆ ವಿರಸಮಹುದು-
ದುಸ್ತರದ ದುಃಖಾಗ್ನಿಯೋಳ್ ಬೇಯುತಿಹ ಮುಗುದೆ
ಗಸ್ತಿಯಂತಾಗಿರುವ ಯೆನ್ನಿರುವ ಪೇಳ್ದೊಡದು
ವಾಸ್ತವದಿ ಹವ್ಯವಾಹನನೆಳಿಸುವಾಜ್ಯಮಹುದಾ
ಮಾನಿನಿಯ ಬಹು ಚಿಂತೆಗೆ.

ಅಗ್ರಹಾರ ಶರ್ಮಾ ಅವರು ತಮ್ಮ ಕಾವ್ಯದಲ್ಲಿ ಸಂದರ್ಭೋಚಿತವಾಗಿ ಬದಲಾವಣೆಯನ್ನು ತರುವುದರ ಜೊತೆಗೆ, ಉಪಮೆ ಹಾಗೂ ದೃಷ್ಟಾಂತಗಳ ಮೂಲಕ ಕಾವ್ಯಕ್ಕೆ ಹೊಸತನವನ್ನು ತಂದಿದ್ದಾರೆ. ಮೇಲಿನ ಪದ್ಯದಲ್ಲಿ 'ಹವ್ಯವಾಹನನೆಳಿಸುವಾಜ್ಯಮಹುದಾ' ಎಂಬ ಪದ ಸಮೂಹದಿಂದ ಯಕ್ಷಿಯ ವಿರಹಾಗ್ನಿಯ ಪ್ರಜ್ವಲನೆಗೆ ಕಟುಸತ್ಯದ 'ಸಂದೇಶ' ಕಾರಣವಾಗಬಹುದೆಂಬ ಸೂಚನೆಯನ್ನು ಕವಿ ದೃಷ್ಟಾಂತಗಳ ಮೂಲಕ ನೀಡಿದ್ದಾರೆ. ಇಂತಹ ದೃಷ್ಟಾಂತಗಳು ಕಾವ್ಯದ ಹಲವು ಕಡೆಗಳಲ್ಲಿ ದೊರೆಯುತ್ತವೆ.

ಪರಿಮಳಿಪುದೋ ಅನಿತೊರೆದು, ಮಧುವು ತುಂಬಿರುವ
ಭರಣಿಯೆನಿಸುವೀ ಸಂದೇಶವನು ನೆಲಜಾತೆ
ಮರುಗುತಿಹ ಸಮಯದಲಿ ವಾನರನು ಕುರುಹಿತ್ತ
ತೆರದೊಳಿದ ಪೇಳ್ವುದಿನಿಯ ।

PAGE DONATED BY : SMT. TRIVENI BHATSHIKAR & SHRI R. T. BHATSHIKAR, GHATKOPAR IN THE MEMORY OF LATE SHRI T. R. BHATSHIKAR

ಮನಸ್ಸಿಗೆ ಹಿತವನ್ನುಂಟುಮಾಡುವ ಸಂದೇಶ ಮಧು ತುಂಬಿದ ಘಟದಂತೆಯೇ ಸವಿಯನ್ನು ನೀಡುತ್ತದೆ. ಇಲ್ಲಿ ಯಕ್ಷನು ದುಃಖದಿಂದ ಮರುಗುತ್ತಿರುವ ತನ್ನಾಕೆಗೆ, ಪವನಸುತ ಸೀತಾಮಾತೆಗೆ ಕುರುಹಿತ್ತು ಸಂತೈಸಿದಂತೆ ಸಮಯೋಚಿತವಾಗಿ ಹಿತವಚನವನ್ನಿತ್ತು ಸಂತಸಗೊಳಿಸಬೇಕೆಂದು ಮೋಡದೊಡನೆ ಕೇಳಿಕೊಳ್ಳುತ್ತಾನೆ. 'ಪವನತನಯಂ ಮೈಥಿಲೀವೋನ್ಮುಖೀ' ಎಂಬ ಮೂಲಕಾವ್ಯದ ಮಾತನ್ನು ಶರ್ಮಾ ಅವರು ಈ ರೀತಿಯಲ್ಲಿ ವಿಶ್ಲೇಷಿಸಿದ್ದಾರೆ. ಮುಂದಿನ ಪದ್ಯದಲ್ಲಿ ಯಕ್ಷನು ಪಾರ್ವತಿಯನ್ನಗಲಿದ ಶಿವನೂ ತನ್ನಂತೆಯೇ ವಿರಹದಿಂದ ನವೆಯುತ್ತಿದ್ದಾನೆಂದು ಯಕ್ಷ ನುಡಿಯುತ್ತಾನೆ.

ಭಕುತಜನಗಣಗಳವನಂ ಬಿಡದೆ ಪೂಜಿಸುತ
ಭಕುತ ಜನಸೇವಕನೆನುತ ಕರೆಯುತಲಿ ದೇವ
ಭಕುತಜನಪಾಲಕನ ತಡೆದಿಹರವನು ನವೆಯುತಿಹನೆನ್ನ ತೆರದಂದದಿ.

'ಕುಮಾರಸಂಭವ'ದಲ್ಲಿ ಶಿವ ಪಾರ್ವತಿಯರನ್ನು ಒಂದುಗೂಡಿಸುವ ಪ್ರಯತ್ನದಲ್ಲಿ ಮನ್ಮಥ ಭಸ್ಮೀಭೂತನಾಗುತ್ತಾನೆ. ಆದರೆ, ಇಲ್ಲಿ ಶಿವಪಾರ್ವತಿಯರನ್ನು ಒಂದೆಡೆ ಸೇರಿಸಿ, ಅವರ ಸೇವೆಗೈದ ಪುಣ್ಯದಿಂದ, ಮೇಘನೊಡನೆ ಆದೇಶಗೈದ ಯಕ್ಷರಾಜ ಶಾಪ ವಿಮೋಚನೆಗೊಂಡು ತನ್ನ ಪ್ರಿಯೆಯನ್ನು ಮರಳಿ ಸೇರುವಂತಾಗುತ್ತದೆ. ಹೀಗೆ ಅಗ್ರಹಾರ ಶರ್ಮಾರವರ ಕಾವ್ಯದಲ್ಲಿ ಮೂಲಕ್ಕಿಂತ ಭಿನ್ನವಾದ ಹಲವು ಬದಲಾವಣೆಗಳಾಗಿವೆ.

'ನಾನು ಓದಿದವನಲ್ಲ. ನನ್ನ ಆಪ್ತ ಮಿತ್ರರ ಮುಖದಿಂದ ಮೇಘದೂತವನ್ನು ಕೇಳಿದೆ. ಅದು ನನ್ನ ಕಿವಿಗೆ ನೊಚ್ಚಗಾಯಿತು; ಅಷ್ಟಕ್ಕೇ ಬಿಡದೆ ಹೊರಹೊಮ್ಮತೊಡಗಿತು' ಎಂದು ಕವಿ, ಕೇವಲ ಶ್ರವಣ ಮಾಡಿದ ಜ್ಞಾನದಿಂದ ತಾನು ಕಾವ್ಯ ರಚಿಸಿರುವುದಾಗಿಯೂ ತನ್ನ ಸಂಸ್ಕೃತ ಜ್ಞಾನ ಅಲ್ಪವೆಂದೂ ನುಡಿದಿದ್ದಾರೆ. ಕಾವ್ಯ ಜಗತ್ತಿನಲ್ಲಿ ಯಾರೂ ಹಿರಿಯರಿಲ್ಲ, ನಿರುಮಲಾನಂದ ಕವನ ಪೀಯೂಷವನ್ನು ಸವಿಯುವುದೇ ಕವಿಯ ಉದ್ದೇಶ. ಪರಮಾನಂದ ಪ್ರಾಪ್ತಿಯೇ ಕಾವ್ಯ ರಚನೆಯ ಪರಮೋದ್ದೇಶವೆಂಬುದು ಅವರ ನಂಬಿಕೆ. ತವೆತವೆ, ತಳತಳಿಪ, ಸುಳಿಸುಳಿವ, ಬುದುಬುದಿಪ, ಪೊನಪೊನಲ, ಹಳಹಳಿಪ, ಗಳಗಳಿಪ, ದಳದಳದಿ ಮೊದಲಾದ ಛೇಕಾಲಂಕಾರ ಪದಗಳು ಇವರ ಕಾವ್ಯದಲ್ಲಿ ದೊರೆಯುತ್ತವೆ. ಅಲ್ಲದೆ, ವೀರರಸ ಪ್ರಧಾನವಾಗಿರುವ 'ಚತುರ್ದಶಭುವನದಲ್ಲಣನೆನಿಸಿ' ಮೊದಲಾದ ಪದಗಳ ಬಳಕೆ, ಕರ್ನಾಟಕದ ಗಂಡುಕಲೆಯೆನಿಸಿದ ಯಕ್ಷಗಾನ ಪ್ರಸಂಗಗಳ ಪ್ರಭಾವ ಇವರ ಮೇಲಾಗಿರುವುದನ್ನು ದರ್ಶಿಸುತ್ತದೆ. 'ಕನಕವಲಯಭ್ರಂಶರಿಕ್ತಪ್ರಕೋಷ್ಟಃ' ಎನ್ನುವಲ್ಲಿಯೂ ಯಕ್ಷನಂತೆಯೇ ಆತನ ಪತ್ನಿಕೂಡ ಪತಿ ವಿರಹದಿಂದ ಕೃಶಳಾಗಿದ್ದಳು. ಪರಿಣಾಮವಾಗಿ ಅವಳ ಕೈಬಳೆಯೂ ಕಳಚುತ್ತಿದೆ. ಅವಳು ನೋಡಲು ಮುದುಕಿಯಂತಾಗಿದ್ದಾಳೆ ಎಂದು ಅಗ್ರಹಾರ ಶರ್ಮಾ ಅವರು ವಿಶಿಷ್ಟವಾಗಿ ಅರ್ಥೈಸಿದ್ದಾರೆ. ಇದು ಮೂಲದ ಅಭಿಪ್ರಾಯಕ್ಕೆ ವ್ಯತಿರಿಕ್ತವಾಗಿದೆ. 'ನೀನಲಾ ಮೊದಲಿನಲಿ ಮಧುಕೈಟಭರ ಕೊಂದು?.' ಮೊದಲಾದ ಪದ್ಯಗಳಲ್ಲಿ ಮಹಾವಿಷ್ಣುವಿನ ದಶಾವತಾರದ ವರ್ಣನೆಗಳು ತುಂಬಿಕೊಂಡಿವೆ. 'ಗತ್ವಾ ಚೋರ್ಧ್ವಂ ದಶಮುಖಭುಜೋ?' ಎಂಬ ಪದ್ಯಕ್ಕೆ ಪೂರಕವಾಗಿ ಈ ಪದ್ಯವನ್ನು ಹೆಣೆದಿರಬಹುದೆಂದು ಊಹಿಸಬಹುದು. ಏಕೆಂದರೆ, ಮೂಲಪದ್ಯ ವಿಷ್ಣುವಿನ ರಾಮಾವತಾರದ ಕಥೆಯನ್ನು ವಿವರಿಸುತ್ತದೆ.

ನಿಜತೇಜನು ಪೊಂದಿ ತನ್ನನೇ ನೆನೆನೆನೆದು
ವಿಜನದಡವಿಯ ಯೋಗಿಯಂತಿರ್ಪ ಭಾರ್ಯೆಯನು
ವಿಜಿತನಾ ಯಕ್ಷಕನು ಸಾದರದಿ ಪಡೆದನೆಂಬೀ ಕಥೆಯು ಕರ್ನಾಟದಿ
ಸುಜನಪಾಲಕನ ದಯದಲಾದೊಡೆಯ ರಚಿತಮಿದು
ಸುಜನ ಗಡಣಂಗಳಿಂದೆಸೆಯುವಗ್ರಹಾರದ
ನಿಜವಾಸಿ ನರಸಿಂಹ್ಮರಣುಗ ಭರದ್ವಾಜ ಗೋತ್ರಭವನದೆಂಬನಿಂದ.

ಕಾವ್ಯದ ಈ ಕೊನೆಯ ಪದ್ಯದಲ್ಲಿ 'ಸುಜನಪಾಲಕನ ದಯೆ' ಎನ್ನುವುದು ದೇವತಾ ಸ್ತುತಿಯನ್ನು ಸೂಚಿಸುತ್ತದೆ. ದೇವಸ್ತುತಿಯ ಜೊತೆಗೆ, ಯಕ್ಷನು ಕಳೆದುಕೊಂಡ ತನ್ನ ತೇಜಸ್ಸನ್ನೂ, ಅಗಲಿದ ಮಡದಿಯನ್ನೂ ಮರಳಿ ಪಡೆದು ಸಂತಸದಿಂದಿದ್ದನು ಎಂಬ ಸಂಗತಿಯೊಂದಿಗೆ ಕಾವ್ಯವು ಸುಖಾಂತವಾಗುತ್ತದೆ. ಕವಿ ತನ್ನ ಗ್ರಾಮದ ಮತ್ತು ಕುಲದ ಪರಿಚಯವನ್ನೂ ತನ್ನ ಹೆಸರನ್ನೂ ಉಲ್ಲೇಖಿಸಿದ್ದು ಪ್ರಸ್ತುತ ಕಾವ್ಯ ಕೃತಿಯ ವೈಶಿಷ್ಟ್ಯವಾಗಿದೆ.

ಇತರರಿಂದ ಕೇಳಿ ತಿಳಿದು, ಅದರ ಆಧಾರದಿಂದ ಉತ್ತಮವಾದ ಕಾವ್ಯ ರಚನೆಯನ್ನು ಮಾಡಿರುವುದು ಕವಿಯ ಪ್ರತಿಭೆಗೆ ಸಾಕ್ಷಿಯಾಗಿದೆ. ಅಂದು ಕಾಳಿದಾಸನ ಮೇಘದೂತ ಕಾವ್ಯ ಜನಪದರಲ್ಲಿ ಮುಖೋದ್ಗತವಾಗಿತ್ತು ಎಂಬುದನ್ನು ಇದು ಬೋಧಿಸುತ್ತದೆ.

*(ಮುಂದುವರಿಯುವುದು)*

---

*(3ನೇ ಪುಟದಿಂದ)*

ಹಾಲಿನ ಕೊಡವನ್ನಿಡಲು ಆ ಸರ್ಪವು ಅದರಲ್ಲಿ ಸೇರುವುದು. ನಿನ್ನ ಕುಪ್ಪುಸದಿಂದ ಆ ಕೊಡದ ಬಾಯನ್ನು ಕಟ್ಟಿ ಬೆಳಿಗ್ಗೆ ನಿನ್ನ ತಾಯಿಗೆ ಬಾಗಿನವನ್ನು ಕೊಡು.' ಎಂದು ಹೇಳಿದಳು. ಆಗ ಸುಶೀಲೆಯು ಎಚ್ಚೆತ್ತು ನೋಡಲು ಸರ್ಪವು ಬಂದಿತ್ತು. ಸುಶೀಲೆಯು ದೇವಿಯ ಅಪ್ಪಣೆಯಂತೆ ಮಾಡಿ ತಾಯಿಗೆ ಕೊಟ್ಟಳು. ಆಗ ತಾಯಿಯು ಆ ಪಾತ್ರೆಯನ್ನು ಬಿಚ್ಚಿ ನೋಡಲು ಅದರಲ್ಲಿ ಮುತ್ತಿನ ಹಾರವಿತ್ತು. ಆ ಹಾರವನ್ನು ಅವಳು ತನ್ನ ಮಗಳಾದ ಸುಶೀಲೆಗೇ ತಿರುಗಿ ಕೊಟ್ಟಳು. ಮುಂದೆ ಅವರು ಸುಖದಿಂದ ಕಾಶೀಯಾತ್ರೆಯನ್ನು ತೀರಿಸಿಕೊಂಡು ಮನೆಗೆ ಬಂದು ನಡೆದಂಥ ಸಂಗತಿಯನ್ನು ಧರ್ಮಪಾಲನಿಗೂ ಅವನ ಹೆಂಡತಿಗೂ ತಿಳಿಸಿದರು. ಅವರು ಸುಶೀಲೆಯನ್ನು ಗೌರವಿಸಿ ಅವಳಿಂದ ಮಂಗಲಾಗೌರೀ ವ್ರತವನ್ನು ಮಾಡಿಸಿದರು.

ಈ ಕಥೆಯು ಶ್ರಾವಣ ಮಾಸಮಾಹಾತ್ಮ್ಯದಲ್ಲಿ ಸ್ವಲ್ಪ ವ್ಯತ್ಯಾಸ ವಾಗಿರುವದು. ಒಟ್ಟಿನ ಮೇಲೆ ಮಂಗಲಾಗೌರಿಯ ವರ ಪ್ರಸಾದದಿಂದ ಸುಮಂಗಲೆಯಾದ ಹುಡುಗಿಯ ಪಾಣಿಗ್ರಹಣ ಮಾಡಿದ ಕಾರಣ ಅಲ್ಪಾಯುಷಿಯಾದ ಹುಡುಗನು ದೀರ್ಘಾಯುಷಿಯಾದನೆಂಬದೇ ಮುಖ್ಯತಾತ್ಪರ್ಯವು.

ಈ ವ್ರತವು ಮಹಾರಾಷ್ಟ್ರದಲ್ಲೂ ಅದರ ಸಮೀಪದ ಕರ್ನಾಟಕದ ಕೆಲವು ಭಾಗದಲ್ಲೂ ಮಾತ್ರ ಪ್ರಚಾರವಿರುತ್ತದೆ. ಇದನ್ನು ಸ್ತ್ರೀಯರು ಶಾಸ್ತ್ರೋಕ್ತವಿಧಿಯಂತೆ ಪೂರ್ಣವಾಗಿ ಆಚರಿಸುತ್ತಾರೆ.

*(ಮುಂದುವರಿಯುವುದು)*

*PAGE DONATED BY :* ***SHRI N. R. HEGDE, DOMBIVLI***

# The Essence of Bhagavad-Gita

✍ **Shraddha Hegde** **(BE-Engg)**



**Dhaivasura Sampad Vibhaga Yoga :** The theme of this chapter revolves around divine and demoniac traits which is present in all creatures. Shri Krishna lists down the qualities of Saintly men as follows: fearlessness, purity of mind, steadfastness in spiritual knowledge, charity, control of the senses, sacrifice, study of the sacred books, austerity and straightforwardness, non-violence, truthfulness, absence of anger, renunciation, peacefulness, restraint from fault-finding and compassion towards all living beings. These are stepping stone towards self-realization and liberation.

Those who possess demoniac nature i.e., hypocrisy, arrogance, conceit, anger, lust, harshness and deluded by ignorance say that the world is unreal and lack belief in God. Thus, they get caught in material bondage and can never attain God. Shri Krishna encourages Arjuna by saying that he is born with divine qualities as he was considering the pros and cons of war, was thinking about the fate of his pupil in the after math and was not acting under the influence of false prestige, selfishness and anger. Hence, there was no reason for Arjuna to lament.

In the end, Shree Krishna declares that the knowledge of the scriptures helps in overcoming ignorance and passion. They also guide us to make the right choices in life. Therefore, we must understand their teachings and accordingly perform our actions in this world. Also, if we try to give up the three gates of hell-Lust, anger and greed, we can gradually attain the supreme destination.

*(To be continued...)*

---

# ಸನಾತನ ಧರ್ಮ

**- ಶಾರದಾ ಎ. ಅಂಚನ್, ಕೊಡವೂರು**

ವರ್ಗ, ಜಾತಿ, ಪಂಥಗಳ ಲೆಕ್ಕಿಸದೆ
ಸಮಸ್ತ ಹಿಂದೂ ಕುಲಕೋಟಿಗಳಿಗೆ
ಶಾಶ್ವತ ಸಂಪೂರ್ಣ ಕರ್ತವ್ಯ
ಧಾರ್ಮಿಕ ದೀಕ್ಷೆಯ ಆಚರಣೆಗಳ
ಪಾಲನೆಯೇ ನಮ್ಮ ಸನಾತನ ಧರ್ಮ ॥

ಪುರಾತನ- ಸನಾತನ ಧರ್ಮವು
ಮಾನವನಿರ್ಮಿತ ಪಂಥವಲ್ಲ
ಗುಂಪುಗಾರಿಕೆಯಿರದ, ಪಂಗಡಗಳಿರದ
ದೇವ ನಿರ್ಮಿತ ಧರ್ಮವೇ
ನಮ್ಮ ಸನಾತನ ಧರ್ಮ ॥

ಸಮಸ್ತ ಲೋಕದೊಡೆಯ ನಾರಾಯಣ
ಬ್ರಹ್ಮನ ಸೃಷ್ಟಿಸಿ, ವೇದಗಳ ಕಲಿಸಿ
ಅವನಿಗೆ ತನ್ನ ತಾನು
ಬಹಿರಂಗಪಡಿಸಿದ
ಧರ್ಮವೇ ಸನಾತನ ಧರ್ಮ ॥

ವೇದಗಳ ಅಧ್ಯಯನ ಮಾಡುವ
ಆಧ್ಯಾತ್ಮನಿಗೆ ದೇವನೇ ತನ್ನನ್ನು
ತಾನು ಬಹಿರಂಗ ಪಡಿಸುವನೆಂಬ
ಉಪನಿಷತ್ತುಗಳ ಪರಿಶುದ್ಧ
ಉಪಮೆಯೇ ಸನಾತನ ಧರ್ಮ ॥

ಸಂಸ್ಕೃತದಲ್ಲಿ, ಸನಾತನ ಧರ್ಮವು
ಶಾಶ್ವತ ಕಾನೂನು - ಶಾಶ್ವತ ಮಾರ್ಗ
ಪಾಲಿಯಲ್ಲಿ-ಸಮಾನ ಪದವು ಧಮ್ಮೋ ಸನಾತನೋ
ಹಿಂದಿಯಲ್ಲಿ, ಸ್ಥೂಲವಾಗಿ "ಶಾಶ್ವತ ಧರ್ಮ"
ಇದುವೇ ನಮ್ಮ ಸನಾತನ ಧರ್ಮ ॥

ವ್ಯಕ್ತಿಯೋರ್ವನ ಧರ್ಮವು
ಆಧ್ಯಾತ್ಮಿಕ ಮತ್ತು ಭೌತಿಕ
ಎರಡೂ ಸಹಜ ಗುಣಲಕ್ಷಣಗಳ
ನಿರಂತರ ಉಳಿಸಿಕೊಳ್ಳುವುದೇ
ನಮ್ಮ ಸನಾತನ ಧರ್ಮ ॥

ಕರ್ತವ್ಯದಲ್ಲಿ ಪ್ರಾಮಾಣಿಕತೆ
ಪರಜೀವಿಗಳ ನೋಯಿಸದೆ
ಹಿಂಸಿಸದೆ, ಶುದ್ಧತೆ, ಸದ್ಭಾವನೆ,
ಕರುಣೆ, ತಾಳ್ಮೆ, ಸಹನೆ,
ಇದುವೇ ನಮ್ಮ ಸನಾತನ ಧರ್ಮ ॥

ಸ್ವಯಂ ಸಂಯಮ,
ಔದಾರ್ಯ ಮತ್ತು ತಪಸ್ವಿಗಳಂತಹ
ಔದಾರ್ಯ, ಸದ್ಗುಣಗಳ
ಪಾಲಿಸಿಕೊಂಡು ಬಂದ ಧರ್ಮವೇ
ನಮ್ಮ ಸನಾತನ ಧರ್ಮ ॥ ❍

*PAGE DONATED BY :* ***AKADAS & FAMILY***

# Licence to Live

✍ L. V. Shastri, Bangalore

We find, often enough, that actions are not preceded by any thought process. Such actions are regarded as arising from instinct. It can be said that acting by instinct is prevalent not just among the human class but in all forms of life that have come into existence on our planet.

Loving to live, not succumbing to death, is probably the strongest instinct in all living forms. I recall reading about an experiment where this was demonstrated. A monkey holding her little offspring on her lap was placed in a drum into which water was admitted from the bottom. As the water level started rising, the mother started holding the baby higher and higher until the water level reached close to the nose. When she saw that the level was slowly rising further she kept her baby below her feet to avoid suffocation and death for herself. Here, the instinct to live had overtaken the strong emotions / instinct of a mother to love her baby. It is as if the mother had come with a licence to live under most adverse circumstances.

Possessing licence for anything presupposes that there is an authority that issues the licence. Is there any authority that instills the universal instinct to live in all living beings? This query would have occurred in human mind long ago. As a result, philosophy systems / schools of thought and religions evolved over millennia. However, most systems have concluded that there is, definitely, an unseen authority. The authority may go by different names that can be summed up in one word GOD. However, the GOD concept would mean something that is unseen and unknowable. Perhaps, it is owing to this aspect of GOD that the authority is called, simply, NATURE. Nature is something that is all around us and can be seen and hence known, even if partially. Replacing GOD by NATURE would greatly simplify the understanding of the licence- issuing authority by human intellect.

The Indian system of Sankhya philosophy, attributed to sage Kapila as the founder, calls the Nature and God aspects as Prakriti and Purusha, both operating in tandem, in the sense that Prakriti follows Purusha, like a shadow, in bringing about all manifestations of creation.

Nature is continuously providing plentiful of bounties with amazing variety so that all beings can live without having to suffer from inadequacy. In other words, Nature offers, on a platter, the licence to live! It is said that Nature provides enough for our basic needs, though not for our greeds!

Human beings have, over centuries, developed codes of conduct such that one's licence to live does not infringe upon or harm the licence to live of any other human being. Even at the level of individuals, rules are framed with proper riders. For example, issuing a driving licence requires that one is ever conscious about observing lane discipline, speed limit etc. so that accidents are avoided.



At the all important level of families, abiding by the licence to live would help in avoiding clashes among the family members over thoughts and actions, especially among different generations. This would make for peaceful and happy living in the families.

Another principle that is constantly operating in Nature is the 'Licence to kill', simultaneously and in sharp contrast to the 'Licence to Live'! Thus, there is the 'food chain' wherein one form of life lives by killing some other form. For example, frogs are food for snakes, rats for cats, cattle and sheep for the big cats- tigers and lions- and so on. The meat of animals becomes food for human beings too.

Modern science, quantum mechanics, finds Duality as a universal phenomenon in the world of matter. The two contrasting principles, licence to live and licence to kill, can be viewed simply as a case of Duality exhibited by one principle viz., sustenance of all living beings.

However, it is very rare in Nature - in the scheme of food chain - that one form of life becomes food for a member of its own class. In other words, in the 'lower' forms of creation, one form of life would avoid killing its own form. But, Alas! in the 'highest' form of life, human beings, such a principle of coexistence is wantonly violated!

Justifications for one group of humans - kingdoms or nations - going on war, killing human beings in thousands are rooted essentially in greed. It may be expansion of territory, improving economic conditions of one lot by robbing the wealth of another vulnerable lot and similar factors. This situation is totally against the licence to live that is benevolently bestowed on human beings by God / Nature.

Wars have been integral part of our epics - Ramayan and Mahabharath - too. However, justifications for those wars were very different. They were fought for restoring highest standards of ethics and morals in the society. No such considerations form the basis for present day warfares!


In summary, licence to live and licence to kill are operating simultaneously in Nature's scheme of things, but with clear- cut demarcations between the two. Humanity can live with peace and prosperity only by consciously avoiding any trespassing of the above demarcations at all levels - nations, societies and even families. ❍

*PAGE DONATED BY : **SHRI ROKESH HEGDE & FAMILY, DAHISAR***

# ಕವಿ ಮನಸಿನಲ್ಲಿ ಅಚ್ಚುಗೊಂಡ ಯುರೋಪ್

## ಪ್ರವಾಸದ ಹುರುಪಿನಲ್ಲಿ ಇತಿಹಾಸದ ಮೆಲಕು

✍ ಅಮಿತಾ ಭಾಗವತ್




''ನೀರು ಒಸರುತ್ತಿರುವಾಗ ಎಂತಹ ಹಸಿರಾದ ಗಿಡ, ಎಲೆ... ಪ್ರಪಂಚದ ಚೆಲುವನ್ನೆಲ್ಲಾ ಧಾರೆ ಯೆರೆದಂತೆ ಮೈದಳೆದ ಹೂವುಗಳ ಇನ್ನಿಲ್ಲವೆಂಬಂತಹ ಬಿನ್ನಾಣ... ನವನೀತದಂತಹ ಮೃದುಲ ಪಕಳೆಗಳು; ಅವುಗಳ ಅಮೃತ ಸ್ಪರ್ಶವೋ ಅದು ಹೂಬೆಣ್ಣೆಯೇ ಹೌದು, ಬೆರಳ ತುದಿಯಲ್ಲಿ ಬಣ್ಣ, ಗಂಧ, ಪರಿಮಳದ ಸಮ್ಮಿಳನ, ಆ ಕ್ಷಣದ ಜೀವಂತಿಕೆಗೆ ಸಾಕ್ಷೀಭೂತವಾಗಿ ಇದು ಕನಸಲ್ಲವೆಂದು ನಮ್ಮ ಪಂಚೇಂದ್ರಿಯಗಳನ್ನು ಎಚ್ಚರಿಸುವುದು ಸುಳ್ಳಲ್ಲ''.

ಕವಿತೆಯಂತೆ ತೋರುವ ಈ ಸಾಲುಗಳು ಗೋಪಾಲ ತ್ರಾಸಿಯವರ ವಿರಚಿತ 'ಲಂಡನ್ ಟು ವ್ಯಾಟಿಕನ್ ಸಿಟಿ' (ಎಂಟು ದೇಶ ನೂರೆಂಟು ವಿಶೇಷ) ಪ್ರವಾಸ ಕಥನದಲ್ಲಿ ಹಾಲೆಂಡಿನ ಟ್ಯೂಲಿಪ್ ಹೂದೋಟದ ಸೌಂದರ್ಯವನ್ನು ಹೊರಗೆಳೆಯುತ್ತಿವೆ. ಕವಿ ಮನಸ್ಸಿನೊಂದಿಗೆ, ಇತಿಹಾಸದ ಕುರಿತು ಅವರಿಗಿರುವ ಜಿಜ್ಞಾಸೆ ಹಾಗೂ ಭೂಗೋಳದ ಜ್ಞಾನವೂ ಸೇರಿಕೊಂಡಾಗ ಅವರು ಕಂಡ ಯುರೋಪ್ ತನ್ನ ವೈಶಿಷ್ಟ್ಯತೆ ಹಾಗೂ ವೈವಿಧ್ಯತೆಗಳೊಂದಿಗೆ ನಮ್ಮ ಕಣ್ಣೆದುರು ಹಾದು ಹೋಗುತ್ತದೆ.

ಪ್ರವಾಸದ ಮುನ್ನ ಗರಿಕೆದರುವ ತಮ್ಮ ಉತ್ಸಾಹದ ಜೊತೆಗೆ ಅದಕ್ಕಾಗಿ ಮಾಡಬೇಕಾದ ತಯಾರಿ, ವಹಿಸಬೇಕಾದ ಮುಂಜಾಗ್ರತೆಗಳನ್ನು ಉಲ್ಲೇಖಿಸುವುದರ ಮೂಲಕ ತ್ರಾಸಿಯವರು ತಮ್ಮ ಪ್ರವಾಸ ಕಥನಕ್ಕೆ ಚಾಲನೆ ಕೊಡುತ್ತಾರೆ. ಲಂಡನ್‌ನಲ್ಲಿ ಪ್ರವಾಸಿಗರಾಗಿ ಇಳಿದಾಗ, ಒಮ್ಮೆ ನಮ್ಮನ್ನೆಲ್ಲಾ ಆಳಿದ ವಸಾಹತುಶಾಹಿ ರಾಷ್ಟ್ರ ಇಂದು ನಮ್ಮನ್ನು ಸ್ವಾಗತಿಸುತ್ತಿದೆ ಎಂದು ಲೇಖಕರು ಸಂತೋಷಪಡುವಾಗ ಓದುಗನೂ ಪುಳಕಗೊಳ್ಳುತ್ತಾನೆ. ಲಂಡನ್ ಶಹರದೊಳಗಿನ ಲಂಡನ್ ಬ್ರಿಜ್, ಬಿಗ್‌ಬೆನ್ ಟವರ್, ಮ್ಯಾಡಮ್ ಟುಸ್ಸಾಡ್ ವ್ಯಾಕ್ಸ್ ಮ್ಯೂಸಿಯಂ, ಬಕ್ಕಿಂಗ್ ಹ್ಯಾಮ್ ಪ್ಯಾಲೇಸ್ ಇವುಗಳನ್ನು ಬಣ್ಣಿಸುವ ಲೇಖಕರು ಗ್ಲೋಬ್ ಥೇಟರಿನ ಆವರಣದಲ್ಲಿ ಭಾವುಕರಾಗುತ್ತಾರೆ. ವಿಶ್ವರಂಗಭೂಮಿಗೆ ಹೊಸ ಭಾಷ್ಯವನ್ನು ಬರೆದ, ಬದುಕನ್ನು ಗ್ರಹಿಸುವ ಭಿನ್ನ ನೋಟವನ್ನು ನೀಡಿದ, ಹೊಸ ಎಚ್ಚರವನ್ನು ಮೂಡಿಸಿದ ಮಹಾನ್ ನಾಟಕಕಾರ ಶೇಕ್ಸ್‌ಪಿಯರ್‌ನಿಗೆ ನಮನವನ್ನು ಸಲ್ಲಿಸುತ್ತಾರೆ. ಪಂಚತಾರಾ ಹೋಟೇಲಿನ ಸೌಲಭ್ಯವನ್ನು ಹೊಂದಿದ ದೈತ್ಯ ಹಡಗಿನಲ್ಲಿ ಹಾಲೆಂಡ್‌ಗೆ ಬಂದಾಗ ಕಾಲುವೆಗಳ ನಗರಿ ಆಮಸ್ಟರ್‌ಡಮ್ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತ, ಜಗತ್ತಿನ ಅತಿ ಹೆಚ್ಚು ಸೈಕಲ್ ಸವಾರರು ಈ ದೇಶದಲ್ಲಿಯೇ ಇದ್ದಾರೆ ಎಂದು ಗುರುತಿಸುತ್ತಾರೆ. ಅಲ್ಲಿಯ ವಿಂಡ್ ಮಿಲ್ಸ, ವುಡನ್ ಶೂ ಫ್ಯಾಕ್ಟರಿ ಮತ್ತು ಚೀಝ್ ಫ್ಯಾಕ್ಟರಿಗಳ ವರ್ಣನೆಯಿದೆ. ಅಲ್ಲಿಯ ಟ್ಯೂಲಿಪ್ ಗಾರ್ಡನ್ ನೋಡಿ 'ಪುಷ್ಪಕಾಶಿ' ಎಂದು ಉದ್ಘಾರವೆತ್ತುತ್ತಾರೆ.

ಫ್ರಾನ್ಸಿನಲ್ಲಿ ಐಫಿಲ್ ಟವರ್ ನೋಡಿ ನಿಬ್ಬೆರಗಾಗುವ ಲೇಖಕರು ಫ್ರೆಂಚ್ ಮಹಾಕ್ರಾಂತಿಯ ಐತಿಹಾಸಿಕ ಹಿನ್ನೆಲೆಯನ್ನು ನೀಡುತ್ತಾರೆ. ಸ್ವಿಝರ್‌ಲ್ಯಾಂಡಿನ ಹಿಮಗಿರಿಯ ಸೌಂದರ್ಯವನ್ನು ತಮ್ಮ ಕವಿ ಹೃದಯದಿಂದ ಆಸ್ವಾದಿಸುತ್ತಾರೆ. ಹಿಮಗಿರಿಗಳ ನಡುವೆ ಓಲಾಡುವ ತೂಗುಸೇತುವೆಯ ಮೇಲೆ ಹಾದು ಹೋದ ತಮ್ಮ ಸಾಹಸಗಾಥೆಯನ್ನೂ ಸೊಗಸಾಗಿ ನಿರೂಪಿಸಿದ್ದಾರೆ. ಇಟಲಿಯ ಕಲಾತ್ಮಕತೆಯನ್ನು ತಮ್ಮ ಲೇಖನಿಯ ಮೂಲಕ ಬಿಂಬಿಸುವ ಇವರು, ರೋಮ್‌ದಲ್ಲಿರುವ ಕೋಲಾಸಿಯಮ್ ಕ್ರೀಡಾಂಗಣದಲ್ಲಿ (ಸುಮಾರು ಎರಡು ಸಾವಿರ ವರ್ಷಗಳ ಕಟ್ಟಡ) ಕ್ರೂರ ಪ್ರಾಣಿಗಳೊಂದಿಗೆ ಕಾಳಗ ನಡೆಸಿ ಜೀವ ಕಳೆದುಕೊಂಡ ಸಾವಿರಾರು ಯುದ್ಧಕೈದಿಗಳನ್ನು ಹಾಗೂ ಗುಲಾಮರನ್ನು ನೆನಪಿಸಿಕೊಂಡು ಮರುಗುತ್ತಾರೆ. ಹಾಗೆಯೇ ತೇಲುವ ನಗರ ವೆನಿಸ್‌ನ ಸೌಂದರ್ಯದ ಜೊತೆ ಅಲ್ಲಿಯ ಮುರೆನೊ ಗಾಜಿನ ಫ್ಯಾಕ್ಟರಿ, ಜಗತ್ತಿನ ಅತಿ ಸಣ್ಣ ರಾಷ್ಟ್ರವಾದ ವ್ಯಾಟಿಕನ್ ಸಿಟಿ ಇವುಗಳ ಬಗ್ಗೆ ವಿವರಣೆಯಿದೆ.

ವಿದೇಶಿಗರ ಶಿಸ್ತಿನ ನಡವಳಿಕೆಯ ಬಗ್ಗೆ ಉಲ್ಲೇಖವಿದೆ. 'ಟ್ರಾವೆಲ್ಸ್ ಎಂಡ್ ಟೂರ್' ಮುಖಾಂತರ ಗುಂಪಿನಲ್ಲಿ ಪ್ರವಾಸವನ್ನು ಮಾಡಿದ್ದರಿಂದ ಗುಂಪಿನಲ್ಲಿ ನಡೆಯುವ ಹಾಸ್ಯ ಪ್ರಸಂಗಗಳು ಪ್ರವಾಸ ಕಥನಕ್ಕೆ ಕಚಗುಳಿ ಕೊಟ್ಟಂತಿವೆ. ವಿದೇಶವನ್ನು ನೋಡುವ ಕುತೂಹಲದ ನಡುವೆಯೂ ಮುಂಬಯಿಯ ವಡಾಪಾವ್, ಪಾವ್‌ಭಾಜಿ ಸಿಕ್ಕಾಗ ಉಂಟಾಗುವ ಸಂತೋಷ ದೇಶಪ್ರೇಮವನ್ನು ಜ್ಞಾಪಿಸುತ್ತದೆ. ಪ್ರತಿಯೊಂದು ಚಾರಿತ್ರಿಕ ಸ್ಮಾರಕದ ವಿವರಣೆ, ಅದರ ಚಾರಿತ್ರಿಕ ಹಿನ್ನಲೆಯೊಂದಿಗೆ ಮೂಡಿಬಂದಿದ್ದರಿಂದ ಅದು ದೃಶ್ಯಗ್ರಾಹಿಯಾಗುತ್ತದೆ. ಹೀಗಾಗಿ ಯುರೋಪ್ ಪ್ರವಾಸ ಮಾಡಿದವರು, ಮಾಡಬೇಕು ಎನ್ನುವವರು ಎನ್ನುವ ಭೇದವಿಲ್ಲದೆ ಪ್ರತಿಯೊಬ್ಬರೂ ಈ ಪುಸ್ತಕವನ್ನು ಆಸ್ವಾದಿಸಬಹುದು.

## HAVYAKA WELFARE TRUST BANK A/C DETAILS

Due to the merger of Corporation Bank with the Union Bank of India we request the members to note the change in the bank details

**Union Bank of India, Santacruz (E), Mumbai Branch, Mumbai 400 029**

1) **Havyaka Welfare Trust**
   **S.B. A/c No. 520101249405926**
   **IFS Code : UBINO904996**

2) **Havyaka Welfare Trust Women Welfare Cell**
   **S.B. A/c No. 520101249405962**
   **IFS CODE : UBINO904996**

**Donations to Havyaka welfare Trust' qualify for tax deduction under section 80 (G).**

*PAGE DONATED BY : **SHRI ANANT GANESH BHAT, BANDRA & FAMILY***

# ಮೃಗನಯನಾ

✍ ಡಾ. ಜಯಂತ ಕಾಯ್ಕಿಣಿ

*(ಕಳೆದ ಸಂಚಿಕೆಯಿಂದ)*

ಕಣ್ಣು ಮುಚ್ಚಿ ತೆಗೆಯುವುದರೊಳಗೆ ಆಪರೇಷನ್ನು, ನಂತರದ ವಿಸಿಟ್ಟು ಎಲ್ಲ ಮುಗಿದು ಒಂದು ವಾರ ಕಳೆದುಹೋಯಿತು. ಆಪರೇಷನ್ನಿನ ಮೂರನೆಯ ದಿನವೇ ದಿಗ್ಯಾ 'ಬಾಳಾ ನನಗೆ ಎಲ್ಲಾ ಎಷ್ಟು ಸ್ಪಷ್ಟವಾಗಿ ಕಾಣ್ತಾ ಇದೆ. ಬೇಕಾದುದಕ್ಕಿಂತ ಜಾಸ್ತಿಯೇ ಸ್ಪಷ್ಟವಾಗಿ ಎಲ್ಲಾ ಕಾಣ್ತಾ ಇದೆ' ಎಂದು ಉದ್ಗರಿಸಿದ, ಕಿರಿದಾದ ಬಾಲ್ಕನಿಯಲ್ಲಿ ನಿಂತು ಸುತ್ತಮುತ್ತಲೂ ಆವರಿಸಿಕೊಂಡೇ ವಿಸ್ತರಿಸುತ್ತಿರುವ ಶಹರವನ್ನು ಮಿಕಿಮಿಕಿ ನೋಡುತ್ತ. ಶಾಲೆಯಲ್ಲಿ ಕವಾಯಿತು ಮಾಡಲು ಅಥವಾ ಗೋಕುಲಾಷ್ಟಮಿಯ ದಿನ ಎಟುಕಲಾರದಷ್ಟು ಎತ್ತರದಲ್ಲಿ ಕಟ್ಟಲಾದ ಮೊಸರು ಕುಡಿಕೆಯನ್ನು ನಿಲುಕಿ ಒಡೆಯಲು ಒಬ್ಬರ ಮೇಲೊಬ್ಬರು ಕೈಕಟ್ಟಿ ಒತ್ತಾಗಿ ಆತುಕೊಂಡು ಏರುವ ಪಿರಾಮಿಡ್‌ಗಳಂತೆ ಎಲ್ಲ ಕಟ್ಟಡಗಳು ಕಾಣುತ್ತಿದ್ದವು. ಜೇನುಗೂಡಿನ ಪುಟ್ಟಪುಟ್ಟ ಖಾನೆಗಳಂಥ ಮನೆಗಳು. ಪ್ರತಿ ಖಾನೆಯ ಕಿಟಕಿಯಲ್ಲೂ ಬಾಲ್ಕನಿಯಲ್ಲೂ ಒಣಗಲು ಹಾಕಿದ ಬಟ್ಟೆಗಳು ಆಯಾ ಸಂಸಾರದ ಉಳಿವಿನ ರಣ ಪತಾಕೆಗಳಂತೆ ಗಾಳಿಯಲ್ಲಿ ಫಡಫಡಿಸುತ್ತಿದ್ದವು. ಸುಸ್ತುಗೊಳಿಸುವಷ್ಟು ಸ್ಪಷ್ಟತೆ. ಕೆಳಗೆ ಜಮಖಾನೆ ಹಾಸಿ ಸಾನೆ ಅತ್ಯಂತ ಕಕ್ಕುಲತೆಯಿಂದ ಉಮೇದಿಯಿಂದ ರೊಟ್ಟಿಗಳನ್ನು ಪ್ಲೇಟಿನಲ್ಲಿಟ್ಟು ಬೆಳ್ಳುಳ್ಳಿಯ ಖಾರ ಚಟ್ನಿಯನ್ನೂ ಮೊಸರನ್ನೂ ವಾಟಿಯಲ್ಲಿ ಹಾಕಿ ಕರೆಯುತ್ತಿದ್ದ. ಮೂವರೂ ಸುತ್ತಲೂ ಕೂತು ಉಣ್ಣುತ್ತಿದ್ದರು. ತಟ್ಟೆ ರೊಟ್ಟಿ ಚಟ್ನಿಯ ಪುಡಿ ಎಲ್ಲವೂ ಸಹ ಭಯ ಹುಟ್ಟಿಸುವಷ್ಟು ಸ್ಪಷ್ಟವಾಗಿ ಕಾಣುತ್ತಿತ್ತು. 'ಬಾಳಾ, ಈಚಿನ ವರ್ಷಗಳಲ್ಲಿ ನನಗೆ ಎಲ್ಲ ಮಂಜು ಮಂಜಾಗೇ ಅಭ್ಯಾಸವಾಗಿ ಹೋಗಿತ್ತು. ನಿನಗೆ ಹೇಳಿಲ್ಲ ನಾನು. ಕಳೆದ ಮೂರು ವರ್ಷಗಳಿಂದ ಆಷಾಢ ಏಕಾದಶಿಗೆ ಪಂಢರಪುರಕ್ಕೆ ಹೋಗುತ್ತಿದ್ದೆ. ಹೋದರೆ ಎಲ್ಲಾ ಮಂಜು ಮಂಜು. ಗುಡ್ಡ ಕಂಡ್ರೆ ಮರ ಕಾಣ್ತಿಲ್ಲ. ಮರ ಕಂಡ್ರೆ ಎಲೆ ಕಾಣ್ತಿಲ್ಲ. ಎಸ್.ಟಿ. ಬಸ್ಸು ಕಂಡ್ರೆ ಬಸ್ಸಿನ ಬೋರ್ಡು ಕಾಣ್ತಿಲ್ಲ. ಭಜನಾ ಮಂಡಳಿಗಳಲ್ಲಂತು ತಲೆಯ ಮೇಲಿನ ಸೆರಗು ಕಾಣ್ತದೆ ಆದ್ರೆ ಮುಖಾ ಕಾಣ್ತಿಲ್ಲ. ಏಕತಾರಿ ಕಾಣ್ತದೆ. ಚಿಪ್ಪಿ ಕಾಣ್ತದೆ ಆದರೆ ಇಸಮು ಕಾಣ್ತಿಲ್ಲ. ಬಹುಶಃ ಈ ವಯಸ್ಸಿಗೆ ಅದೇ ಸರಿಯೋ ಏನೋ' ಎಂದ. ಹಸ್ತಾಕ್ಷರನಿಗೆ ಅಪ್ಪನ ಈಚಿನ ವರ್ಷಗಳ ಈ ಪಂಢರಪುರ ದಿಂಡಿ ಗೊತ್ತಿರಲಿಲ್ಲ. ಖಂಡಿತ ಮರಳಿ ಎಲ್ಲಾದರೂ ಆಯಿ ಚಂದಾಬಾಯಿ ಕಣ್ಣಿಗೆ ಬೀಳಬಹುದೆಂಬ ಅಜ್ಞಾತ ಹಂಬಲದಿಂದಲೇ ಆತ ಹೋಗುತ್ತಿದ್ದಿರಬಹುದು ಅಂತ ಅವನಿಗೆ ಭಾಸವಾಯಿತು. ಒಂದು ಬಗೆಯಲ್ಲಿ ಮಂಜುಗಣ್ಣಿನ ಆ ಅಸ್ಪಷ್ಟತೆಯೇ ಅವನಿಗೆ ಹೆಚ್ಚು ಸಹನೀಯವಾಗಿದ್ದಿರಬಹುದು. ಏಕೆಂದರೆ ಸ್ಪಷ್ಟವಾದಷ್ಟೂ ವಿವರಗಳು ಜುಜುಬಿಯಾಗುತ್ತವೆ. ಇಡೀ ಪಂಢರಪುರ ಸೀಮೆಯೇ ಚಂದಾತಾಯಿಯ ಪ್ರತಿರೂಪದಂತೆ ಹಸಿರು ಕುತನಿ ಸೀರೆ ಉಟ್ಟಿರುವಾಗ, ಕಾಣದ ಕಡಲಿನ ಹಂಬಲ ಹೊತ್ತು ಅಲ್ಲಿಂದ ಗಾಣಗಾಪುರಕ್ಕೂ ಬಂದು ಚಂದ್ರಭಾಗಾ ಪ್ರವಹಿಸುತ್ತಲೇ ಇರುವಾಗ..ಅವಳನ್ನು ಸಣ್ಣ ಸ್ಪಷ್ಟರೂಪದಲ್ಲಿ ಎದುರುಗೊಳ್ಳಲಾದೀತೇ.

ಬಾಬಾನನ್ನು ಪೃಥ್ವಿ ಥೇಟರಿಗೆ ಕರೆದುಕೊಂಡು ಹೋಗುವ ಮುಹೂರ್ತ ಬಂದೇ ಬಿಟ್ಟಿತು. ಬೆಳಕಿನ ಪ್ರಖರತೆಯನ್ನು ಅವಲಂಬಿಸಿ ಛಾಯೆಯನ್ನು ಬದಲಿಸುವ ತಂಪು ಕನ್ನಡಕ ಇದ್ದುದರಿಂದ ಬಾಬಾ ನಿಶ್ಚಿಂತನಾಗಿಯೇ ಇದ್ದ. ಅವನಿಗೆ ಇಷ್ಟವಾದರೆ ನಾಟಕ ನೋಡುವುದು. ಇಲ್ಲವಾದರೆ ಅಲ್ಲಿಂದ ಎರಡೇ ನಿಮಿಷದ ಅಂತರದಲ್ಲಿರುವ ಜುಹೂ ಸಮುದ್ರ ತೀರದಲ್ಲಿ ಒಂದಿಷ್ಟು ಹೊತ್ತು ನಿಲ್ಲುವುದು ಎಂದುಕೊಂಡ ಹಸ್ತಾಕ್ಷರನಿಗೆ ಪೃಥ್ವಿ ಥೇಟರು ಸಮೀಪಿಸುತ್ತಿದ್ದಂತೆ ಏನೋ ವಿಚಿತ್ರವಾದ ಅನುಭವವಾಗತೊಡಗಿತು. ಬಾಕಿ ಸಮಯ ದಲ್ಲಾಗಿದ್ದರೆ ಅದು ತನ್ನದೇ ಹಕ್ಕಿನ ಆವರಣ ಅನಿಸುತ್ತಿತ್ತು. ಆದರೆ ಇಂದು ಬಿಳಿ ಸ್ವಚ್ಛ ಪಾಯಜಾಮ, ಸ್ವಚ್ಛ ಹೊಸ ಅಂಗಿಯಲ್ಲಿ ವಿಧೇಯನಾಗಿ ತನ್ನ ಜೊತೆ ತಾನು ಕರೆದೊಯ್ದಲ್ಲಿ ಬರಲು ತಯಾರಾಗಿರುವ ಈ ಬಾಬಾನ ಉಪಸ್ಥಿತಿಯಲ್ಲಿ ಏನೋ ಸಣ್ಣ ಚಡಪಡಿಕೆ ಆಯಿತು. ಅಪ್ಪನನ್ನೂ ತನ್ನನ್ನೂ ಬೆಸೆಯುವ ಜಗತ್ತಿಗೂ ಮತ್ತು ಇಲ್ಲಿ ಪ್ರತ್ಯಕ್ಷವಾಗಿ ದುಮುದುಮಿಸುತ್ತಿರುವ ಜಗತ್ತಿಗೂ ಮೇಳಾಮೇಳಿ ಆಗುತ್ತಿಲ್ಲ ಅನಿಸತೊಡಗಿತು. ಹೋದ ತಕ್ಷಣ ಕೆಫೆಯ ಕರ್ಮಚಾರಿಗಳೆಲ್ಲ ಇವರು ಕೂತಲ್ಲಿಗೇ ಬಂದು ತುಸು ಬಾಗಿ ವಂದಿಸಿದರು. 'ತಿನ್ನಲು ಏನು ಕೊಡೋಣ?' ಎಂದು ಉತ್ಸುಕತೆಯಿಂದ ಕೇಳಿದರು. ಮುಸ್ಸಂಜೆ ಆಗುತ್ತಿದ್ದುದರಿಂದ ಮತ್ತು ಅಲ್ಲಿ ನಿಬಿಡವಾದ ಮರಗಳ ನೆರಳಿದ್ದುದರಿಂದ ಬಾಬಾರ ಹೊಸ ಕನ್ನಡಕದ ಛಾಯೆ ಕಪ್ಪಿನಿಂದ ತಿಳಿಯಾಗಿತ್ತು. 'ಏನೂ ಬೇಡ ಈಗ, ಸಮುದ್ರ, ಸಮುದ್ರ ನೋಡುವಾ ಬೇಗ. ಅರ್ಧ ಚಾ ಕುಡಿತೇನೆ' ಎಂದ ಬಾಬಾನಿಗೆ ಚಾ ಕುಡಿಸಿ-ಅಲ್ಲಿಯ ನಾಟಕಗಳ ಬೇರೆ ಬೇರೆ ಪೋಸ್ಟರುಗಳನ್ನು ತೋರಿಸಿ, ಪುಸ್ತಕದಂಗಡಿಯನ್ನೂ ತೋರಿಸಿದ. ನಂತರ ಹಸ್ತಾಕ್ಷರ ಮ್ಯಾನೇಜರರ ಅನುಮತಿಯನ್ನು, ಸನ್ನೆಯಿಂದಲೇ 'ಒಂದು ನಿಮಿಷ ಗ್ರೀನ್ ರೂಮ್ ತೋರಿಸಲೆ?' ಎನ್ನುವಂತೆ ಕೈಚಾಚಿ ಕೇಳಿ ಹಿಂಬಾಗಿಲಿನಿಂದ ಬ್ಯಾಕ್ ಸ್ಟೇಜ್ ಕಡೆಗೆ ಮೆಲ್ಲಗೆ ಕೈಹಿಡಿದು ನಡೆಸಿಕೊಂಡು ಹೋದ.



ಹಠಾತ್ತನೆ ಪ್ರಕಾಶಮಾನವಾದ ಕೋಣೆ ಸಿಕ್ಕಿತು. ಅಲ್ಲಿ ಕನ್ನಡಿಯೆದುರು ಒಬ್ಬನೇ ವ್ಯಕ್ತಿ ಕೂತು ಕೂದಲನ್ನು ಒಪ್ಪ ಮಾಡಿಕೊಳ್ಳುತ್ತಿದ್ದ. ಶಫಿ! ಇವರನ್ನು ನೋಡಿದ್ದೇ ಮುಖ ತಿರುಗಿಸದೇ 'ನಮಸ್ತೇ ಜೀ' ಎಂದ. ಅದು ಕನ್ನಡಿಯಲ್ಲಿಯ ಇವರ ಬಿಂಬಗಳಿಗೇ ಹೇಳಿದಂತಿತ್ತು. ಹೊರಳಿದಾಗ 'ಇವರು ನನ್ನ ಬಾಬಾ. ಊರಿಂದ ಬಂದಿದ್ದಾರೆ. ಕರಕೊಂಡು ಬಂದೆ' ಎಂದು ಹಸ್ತಾಕ್ಷರ ಹೇಳಿದಾಗ ಶಫಿ ಎದ್ದು ನಿಂತು ಬಾಗಿ ಬಾಬಾನಿಗೆ ನಮಸ್ಕರಿಸಿದ. 'ಬಾಬಾ, ಇವರು ಶಫಿ ಮರ್ಚಂಟ್. ಅಪ್ರತಿಮ ನಟ ನಿರ್ದೇಶಕ. ಈವತ್ತು ಅವರ ಏಕವ್ಯಕ್ತಿ ಪ್ರದರ್ಶನ ಇದೆ. ಹತ್ತಾರು ಕಥೆಗಳನ್ನು ಹತ್ತಾರು ಪಾತ್ರಗಳ ಮೂಲಕ ಇವರೇ ಅಭಿನಯಿಸ್ತಾರೆ' ಎಂದದ್ದಕ್ಕೆ ಶಫಿ 'ಛೆ ಛೆ...ಹಾಗೇನಿಲ್ಲ. ನಿಮ್ಮ ಆಶೀರ್ವಾದ ಇರಲಿ. ನಿಮ್ಮ ಮಗನಂಥ ಚಾಣಾಕ್ಷ ರಸಿಕ ಪ್ರೇಕ್ಷಕ ನಾವೇನೂ ಮಾಡಿದರೂ ಹೊಟ್ಟೆಯಲ್ಲಿ ಹಾಕಿಕೊಳ್ತಾರೆ' ಎಂದ. ಬಾಬಾ ಹಿಂಜರಿಕೆಯಿಂದಲೇ ಅವನ ಹೆಗಲು ತಟ್ಟಿ 'ಒಳ್ಳೇದಾಗಲಿ. ಕೀರ್ತನಕಾರರ ಪುಣ್ಯ ನಿಮ್ಮೆಲ್ಲರನ್ನು ಕಾಪಾಡಲಿ' ಎಂದು ಮೆಲುದನಿಯಲ್ಲಿ ಹೇಳಿದ. ನಸುಗತ್ತಲಿನ ಸೈಡ್‌ವಿಂಗ್‌ಗಳನ್ನು ದಾಟಿ ಹೊರ ಬರುವಾಗ ಹಸ್ತಾಕ್ಷರನಿಗೆ ಏಕವ್ಯಕ್ತಿ ಪ್ರದರ್ಶನಕ್ಕೂ ಕೀರ್ತನ ಕಲೆಗೂ ಇರುವ ಸೂಕ್ಷ್ಮ ಸಾಮ್ಯವೊಂದು ಹೊಳೆದು ರೋಮಾಂಚನವಾಯಿತು. ಬಾಬಾಗೆ ಈ ಪ್ರದರ್ಶನಕ್ಕಿಂತ ಇನ್ನೊಂದು ದಿನ ದುಬೇ ಅವರ 'ಮಾಯಾವಿ ಸರೋವರ' ತೋರಿಸುವುದೇ ಒಳ್ಳೆಯದು ಅನಿಸಿ 'ಸಮುದ್ರ ನೋಡಲು ಹೋಗೋಣ' ಎಂದ. ಎರಡೇ ನಿಮಿಷಗಳಲ್ಲಿ ಅವರು ಜುಹೂ ಬೀಚಿನಲ್ಲಿದ್ದರು. ಸಂಜೆಯ ಸಂದಣಿ ತೀರದುದ್ದಕ್ಕೂ ವ್ಯಾಪಿಸಿತ್ತು. ಸೂರ್ಯಾಸ್ತ ಆಗಿ ಹೋದ ಕ್ಷಿತಿಜದ ಬಿಂದುವಿನಲ್ಲಿ ಪಡುವಣ ಒಲೆ ಹೊತ್ತಿಸಿದಂತಿತ್ತು. ಕಣ್ಣಿಗೆ ಅನಂತವಾದ ಹಿತವನ್ನು ಕೊಡುತ್ತಿತ್ತು. ಗಾಳಿಯಲ್ಲಿ ಮರಳು ಕಣಗಳು ಬರ್ತಾವೆ ಬೇಡ ಎಂದರೂ ಬಾಬಾ ಸೇಫ್ಟಿ ಕನ್ನಡಕವನ್ನು ತೆಗೆದು ಒಮ್ಮೆ ಇಡೀ ಸಮುದ್ರವನ್ನು ಅಮಾಯಕನಾಗಿ ನೋಡಿದ. ಅವನಿಗೆ ಅಬಬಬಬಬಬಾ ಅನಿಸಿ ಹೋಯಿತು. ಮುಗಿಯಿತು ಅಂದರೂ ಮುಗಿಯದ ಜಲರೇಷ್ಮೆ ಇನ್ನು ಮುಂದೆ ಮಾತಿಲ್ಲ ಅನ್ನುವಂತೆ. ಮಾತುಗಳೆಲ್ಲ ಇಲ್ಲೇ, ತೀರದಲ್ಲೆ. ಎಲ್ಲಿಗೋ ಕರೆದುಕೊಂಡು ಹೋಗಬೇಕಾದ ಹಡಗೇ ಬಂದಿಲ್ಲ ಎಂಬಂತೆ ಇಲ್ಲೇ ಉಳಿದುಹೋದ ಕವಿಯುವ ಕತ್ತಲಲ್ಲಿ ಅಸ್ಪಷ್ಟವಾಗುತ್ತಿರುವ ಜನಸಾಗರ.

*(ಮುಂದುವರಿಯುವುದು)*

(ಸೌಜನ್ಯ : ಅನಾರ್ಕಲಿಯ ಸೇಫ್ಟಿಪಿನ್)

PAGE DONATED BY : **SHRI V. G. BHAT, NIGDI**

# Turning Points in Life

✍ **Dr. Narayan Hegde, Pune**

Dr. Manibhai Desai was a noted Gandhian, who participated in the Quit India Movement and later joined Gandhiji at Sevagram Ashram, Wardha in 1945. After establishing the Nature Cure Ashram at Urulikanchan in 1946, Manibhai was assigned the responsibility of managing it. Later, he founded a Civil Society Organisation named BAIF, which has been helping over 50 lakh poor rural families to earn their livelihood through dairy husbandry and improved agricultural practices. Manibhai was born in a remote village in Surat district and completed his school and college education from Surat, staying at the Anavil Ashram. During his stay at the Ashram, Manibhai took the lead in organising sports and activities related to freedom struggle, managing the hostel mess, etc. and became a popular leader. At the Ashram, Paramanand was one of his great admirers, although he was dumb and quiet. Manibhai had a strong desire to join Mahatma Gandhi to serve the nation and he was planning meet Gandhiji after completing his graduation. However, during the final year of his studies, his elder brothers wanted him to get married and came up with a suitable proposal. Manibhai wanted some time to give his consent. Getting this news, Paramanand came to Manibhai in the evening and spent over two hours pleading with him not to get married. "Manibhai, you are not an ordinary person. You have come with a great mission to serve the society and the Nation. Do not make the mistake of getting married now, at least till you meet Gandhiji" Paramanand pleaded, begged and cried! Manibhai consoled him, but could not sleep throughout that night. That was the turning point in his life. Manibhai remained a bachelor and served the society until his last breath.

Such turning points come in every person's life. My friend was worried about his only son Ravi, who was not very serious in his studies, although he was brilliant. Ravi's mother used to motivate him to study and get better marks, but he did not bother. Ravi spent more time in sports and creative games and was not interested in reading text books. Fortunately, he got admission for engineering degree but was reluctant to listen to his parents anymore. He successfully completed 4 semesters and in the fifth semester, he performed better, but the result brought a big surprise. Ravi had secured second rank and many teachers complimented him. That was the turning point in his life. Ravi became more serious in his studies and started performing even better. With very impressive grades during the next two years, he got admission for M.Tech. in the United States. Later, he completed his MBA and performed better than most of his school mates who had done far better in their school exams.



My other friend Ramesh, was a son of a big landlord who enjoyed a luxurious lifestyle. He had no interest in studies, although his mother was constantly monitoring him. His mother wanted him to study engineering but Ramesh decided to study agriculture, as he wanted to get a degree with ease and return to farming. Being a residential degree course, he had to stay in a hostel, with two other roommates during the initial two years. Fortunately, both of them were very studious. One of them was studying every day till midnight and getting up around 7 am. The other one got up at 4 am to study in a quiet atmosphere and went to bed around 10 pm. However Ramesh got up at 7 am and slept at 10 pm, without making very serious efforts to study. His mother was regularly reminding him to study hard and behave well with others. At the end of the first year's exam, Ramesh scored very well to get third rank, which he himself could not believe. His roommates were also surprised to see his performance without making serious efforts. That was the turning point in his life. Ramesh never looked back. He completed his post-graduation from a reputed national institution with merit scholarship, went to USA for further studies and became a reputed professional in his field.

There are thousands of youth like Ravi and Ramesh, who are neither studious nor focused about their early career, in spite of having good potential to excel. Very small number of them experience the turning points during the latter part of their education to perform better while some others experience them in their mid-career to settle even without better education, while the rest are deprived of this opportunity. These cases suggest that parents, teachers and friends play a vital role in creating turning points and making best use of them. They help the youth to gain good knowledge and develop wisdom. They also create good ambience and opportunity to sensitize the youth, change their mind-set and set their thinking process in the right direction. This gives a message that persons in the company of good and enlightened people have good opportunity to develop their intellect and take suitable corrective actions to change their lives for better.

*(Source : Bhavan's Journal)*

*PAGE DONATED BY :* ***SMT. KALA BHAGWAT,*** **KHARGAR** ***IN MEMORY OF MOTHER LATE SMT. GOURI BHAT***

# ಜೀವನವನ್ನು ಅಸ್ತವ್ಯಸ್ತವಾಗಿಸುವ ಆಷಾಢ

✍ ಪ್ರೊ. ಆರ್. ಜಿ. ಹೆಗಡೆ

ಆಷಾಢ ಮಾಸ ಕರಾವಳಿಯ ಹಳ್ಳಿಗಳಲ್ಲಿ ಅಡಚಣೆ ಮತ್ತು ಸಂಕಷ್ಟದ ಸಮಯ. ಬಿಟ್ಟೂ ಬಿಡದೆ ವಾರಗಟ್ಟಲೆ ಸುರಿಯುವ ಭೀಕರ ಮಳೆ ಜೀವನವನ್ನು ಅಸ್ತವ್ಯಸ್ತವಾಗಿಸಿಬಿಡುತ್ತದೆ. ಯಾರೋ ಆಕಾಶದಿಂದ ಕೊಡಪಾನದಲ್ಲಿ ನೀರು ಸುರಿಯುತ್ತಿರುವ ಹಾಗೆ ಮಳೆ. ಅಥವಾ ಗಗನದಲ್ಲಿ ಪಂಪ್‌ಸೆಟ್ ಚಾಲು ಮಾಡಿ ಭೂಮಿಯತ್ತ ನೀರು ಹಾರಿಸಿದ ಹಾಗೆ. ರಚ್ಚು ಹಿಡಿದು ಪ್ರತೀಕಾರ ತೆಗೆದುಕೊಳ್ಳುವ ರೀತಿಯಲ್ಲಿ ಮಳೆ ಹೊಯ್ಯುತ್ತದೆ. ಒಂದು ಮಳೆಯ ಅಲೆ ಹೊಯ್ಯುತ್ತಿರುವಾಗಲೇ ಇನ್ನೊಂದು ಸುತ್ತಿನ ಮಳೆ ಬಂದು ರಪರಪನೆ ಹೊಡೆಯುತ್ತದೆ. ಎಂತಹ ಶಕ್ತಿ ತುಂಬಿದ ಮತ್ತು ಆರ್ಭಟದ ಮಳೆ ಎಂದರೆ ರೋಗುಡುತ್ತ ಬರುವ ಅದರ ಸದ್ದು ಸುಮಾರು ಅರ್ಧಕಿಲೋಮೀಟರ್ ದೂರದಿಂದಲೇ ಕೇಳಿಸುತ್ತದೆ. ಮನೆಯ ಮಾಡುಗಳ ಮೇಲೆ ಸುರಿಯುವ ರಭಸಕ್ಕೆ ಡಬಲ್ ಪಳಿ ಹಂಚುಗಳಿಗೂ ನೀರನ್ನು ಅಂಪಾಯಿಸಲು ಆಗುವುದೇ ಇಲ್ಲ. ತುಂಬಿ ಹರಿವ ನೀರು ಹಂಚುಗಳ ನಡುವಿನ ಸೂಕ್ಷ್ಮ ಗ್ಯಾಪ್‌ನಲ್ಲಿ ಇಳಿದು ಮನೆಯೊಳಗೂ ಮಳೆ. ಒಳಸುರಿಯುವ ನೀರು ಹರಿದು ಹಳ್ಳವಾಗದಂತೆ ಮಾಡಲು ಹನಿಗುತ್ತುವಲ್ಲಿ ತಪ್ಪಲೆ, ತಂಬಿಗೆ, ಕೊಡಪಾನ ಇಡಬೇಕು. ಆಷಾಢದ ಮಳೆಗೆ ಎಂತಹ ಮನೆಯಾದರೂ ತುಸು ಸೋರಲೇಬೇಕು. ಅಂತಹ ತೀವ್ರತೆಯ ಮಳೆಯದು.

ಈಗ ಮನೆಯಿಂದ ಹೊರ ಬೀಳಲು ಸಾಧ್ಯವೇ ಇಲ್ಲ. ಕನಿಷ್ಠ ಪಕ್ಷ ಸುಲಭವಂತೂ ಅಲ್ಲ. ಗಾಳಿ ಮಳೆಗೆ ಕೈ ಬಿಟ್ಟರೆ ಕೊಡೆ ಹಾರಿ ಹೋಗುತ್ತದೆ. ಇಲ್ಲವಾದರೆ ಕೊಡೆ ಕ್ಷಣಾರ್ಧದಲ್ಲಿ ತಲೆಕೆಳಗಾಗಿ ಹೋಗಿ ಮೈ ಒದ್ದೆಮುದ್ದೆ. ಅಂಗಳದಲ್ಲಿ ಹಾಕಿದ ಅಡಿಕೆದಬ್ಬೆಯ ಸಂಕ ಹಾಮಸ್ಕಲು ಹಿಡಿದು ಜಾರೆಯಾಗಿ ಹೋಗಿರುತ್ತದೆ. ರಸ್ತೆಯಲ್ಲಿ ಮರ ಬಿದ್ದಿರುತ್ತದೆ. ಧರೆ ಜರಿದು ಬಿದ್ದು ಕಲ್ಲುಗಳು ತುಂಬಿರುತ್ತವೆ. ರಸ್ತೆ ಕೊಚ್ಚಿ ಹೋಗದಂತೆ ಅಡ್ಡಡ್ಡ ತೆಗೆದ ಕಾರಗೆಗಳೇ ಈಗ ದೊಡ್ಡದಾಗಿ, ಆಳವಾಗಿ ಹೋಗಿಬಿಟ್ಟಿರುತ್ತವೆ. ಅದರೊಳಗೆ ನೀರುತುಂಬಿ ರಸ್ತೆಯ ಹೊಂಡ ಹುಳಿ ತಿಳಿಯುವುದೇ ಇಲ್ಲ. ರೇನ್ ಕೋಟ್ ಧರಿಸಿದರೂ ಮುಖ ಎತ್ತಿದರೆ ಕಣ್ಣಲ್ಲಿ ತುಂಬಿಕೊಳ್ಳುವ ಮಳೆ ನೀರು. ದನಕರುಗಳು, ಪ್ರಾಣಿಗಳು ಕೂಡ ಆ ಮಳೆಯಲ್ಲಿ ತಲೆತಗ್ಗಿಸಿಯೇ ನಡೆಯಬೇಕು. ಹತ್ತಿರ ಬರುವ ತನಕ ಮುಂದೆ ಕಾಣುವುದೇ ಇಲ್ಲ. ಚಪ್ಪಲಿ ಹಾಕಿ ಹೊರಬಿದ್ದರೆ ಪಚಪಚ ಎಂದು ನೀರು ಬೆನ್ನಿನ ಹಿಂದೆ ಸಿಡಿದು ಬಟ್ಟೆರಾಡಿಯಾಗಿ ಹೋಗುತ್ತದೆ. ಹಾಕಿಕೊಂಡು ಹೋಗದಿದ್ದರೆ ಕಾಲಿಗೆ ನಂಜುಕೆರೆದು ಬೆರಳುಗಳು ಉದುರಿಹೋಗುವ ಸ್ಥಿತಿಗೆ ಬರುತ್ತವೆ. ಇವೆಲ್ಲ ಆಷಾಢದ ಸಾಮಾನ್ಯ ಚಿತ್ರಗಳು.

ಸುಮಾರು ಇಪ್ಪತ್ತು ಮೂವತ್ತು ವರ್ಷಗಳ ಹಿಂದಿನ ಪರಿಸ್ಥಿತಿ ಯಾರಿಗೂ ಬೇಡ. ಏಕೆಂದರೆ ಅಂದು ಕೊಡೆಗಿಡೆ ಇರುವುದು ಅನುಕೂಲಸ್ಥರ ಮನೆಗಳಲ್ಲಿ ಮಾತ್ರ. ಇದ್ದರೂ ಒಂದು ಅಥವಾ ಎರಡು. ಆ ಕೊಡೆಗಳನ್ನು ಹಿಡಿದು ಯಾರಾದರೂ ಈಗಾಗಲೇ ಹೋಗಿಬಿಟ್ಟಿದ್ದರೆ ಮೂರನೆಯವರು ಹೊರ ಬೀಳುವಂತಿಲ್ಲ. ಮತ್ತೆ ಸಾಧಾರಣವಾಗಿ ಆ ಕೊಡೆಗಳದೂ ಕಡ್ಡಿಗಳು ಮುರಿದುಹೋಗಿ ಆ ಭಾಗ ಮುರಿದುಹೋದ ಹಕ್ಕಿಯ ರಟ್ಟೆಯ ಹಾಗೆ ನೇತಾಡುತ್ತಿತ್ತು. ಕೊಡೆ ಹಿಡಿದು ಕೆಳಗಿಳಿಯುವುದೂ ಒಂದೇ, ಬಿಟ್ಟರೂ ಒಂದೇ. ಆದರೆ ಆ ದಿನಗಳಲ್ಲಿ ಮನೆಗಳಿಂದ ಹೊರಬೀಳುವ ಅಗತ್ಯವೂ ಕಡಿಮೆಯೇ. ಶಾಲೆಯ ಮಕ್ಕಳು ಕಂಬಳಿ ಸೂಡಿಕೊಂಡು ಹೋಗುತ್ತಿದ್ದರು.



ಕಾಲೇಜಿಗೆ ಹೋಗುವ ಮಕ್ಕಳು ಹೇಗೋ ಸುಧಾರಿಸಿಕೊಳ್ಳುತ್ತಿದ್ದರು. ಉಳಿದಂತೆ ಆ ಬಿರುಮಳೆಯಲ್ಲಿ ತೋಟಕ್ಕೆ ಹೊರಗೆ ಹೋಗಿ ಮಾಡುವುದಾದರೂ ಏನಿದೆ?

ದೊಡ್ಡ ಸಮಸ್ಯೆ ಎದುರಾಗಿ ಹೋಗುತ್ತಿದ್ದುದು ತಂಬಿಗೆ ತೆಗೆದುಕೊಂಡು ಗುಡ್ಡಕ್ಕೆ ಹೋಗುವಾಗ. ಆಗಂತೂ ಮನೆಯಿಂದ ಹೊರ ಬೀಳಲೇಬೇಕು. ತಂಬಿಗೆ ಬೇಕೇ ಬೇಕೆಂದೇನೂ ಇರಲಿಲ್ಲ. ಗುಡ್ಡದ ಮೇಲಿನ ಕೊಡ್ಲುಗಳಲ್ಲಿ ಶುದ್ಧ ನೀರು ಹರಿಯುತ್ತಲೇ ಇರುತ್ತಿತ್ತು. ಆದರೆ ಕೊಡೆ ಬೇಕೇಬೇಕು. ಕಂಬಳಿ ಸೂಡಿಕೊಂಡು ಅದಕ್ಕೆಲ್ಲ ಹೋಗುವಂತಿಲ್ಲ. ಹಾಗಾಗಿ ಒಮ್ಮೆಲೇ ಹೋಗಿ ಬರುವ ಸಂದರ್ಭ ಬಂದು ಬಿಟ್ಟರೆ ಅದು ದೊಡ್ಡ ಸವಾಲಿನ ವಿಷಯ. ಡೀಸೆಂಟ್ರಿ ಹತ್ತಿದರಂತೂ ಪರಿಸ್ಥಿತಿ ಬೇಡವೇ ಬೇಡ. ಇಂತಹ ಸಂದರ್ಭಗಳಲ್ಲಿ ಗಂಡಸರು ಹೇಗೋ ಪಾರಾಗುತ್ತಿದ್ದರು. ಹೆಂಗಸರ, ಹೆಣ್ಣು ಮಕ್ಕಳ ಪರಿಸ್ಥಿತಿ ಯಾರಿಗೂ ಬೇಡ. ಗುಡ್ಡದ ಮೇಲಿನ ಗಾಳಿಯಲ್ಲಿ ಕೊಡೆಯನ್ನು ಹಿಡಿದಿರಿಸಿಕೊಂಡು ವಾಪಸು ತರುವುದೂ ದೊಡ್ಡ ಸಾಹಸವೇ. ಅಂತಹ ಗಾಳಿ ಬಂದರೆ ಕೊಡೆಯ ರಕ್ಷಣೆಗಾಗಿ ತ್ಯಾಗ ಮಾಡಲೇಬೇಕು. ಅದನ್ನು ಮಡಿಸಿಕೊಂಡು ಮಳೆಯಲ್ಲಿ ನಿಲ್ಲಲೇ ಬೇಕು. ಇಲ್ಲವಾದರೆ ಕೊಡೆಕಡ್ಡಿ ಮುರಿದುಹೋಗುತ್ತದೆ.

ಹಳ್ಳಿಗಳಲ್ಲಿ ಬ್ರಿಜ್‌ಗಳು, ಕಾಲು ಸಂಕಗಳು ಇಲ್ಲ. ಹೊಳೆ ದಾಟಲು ಅಡಿಕೆ ಮರಗಳ ಸಂಕ ಹಾಕುವುದು, ಅಂದರೆ ಅಡಿಕೆ ಮುಂಡಿಗಳನ್ನು ಮಲಗಿಸಿ ಬ್ರಿಡ್ಜ್ ಮಾಡುವುದು. ಹಾಸಿರುವ ಮೂರು ಅಡಿಕೆ ಮರಗಳಲ್ಲಿ ಎರಡರ ಮೇಲೆ ಕಾಲಿಡುವಂತಿಲ್ಲ. ಮಳೆಗೆ ಲಡ್ಡಾಗಿ ಹೋಗಿರುತ್ತವೆ. ಅಲ್ಲದೆ ನಡೆದಂತೆ ಮುಂಡಿ ಮೇಲೆ ಕೆಳಗೆ ಆಗುತ್ತಿತ್ತು. ಹೀಗಾಗಿ ಹಳ್ಳ ದಾಟುವುದು ದುಸ್ಸಾಹಸ. ಹಸರಳ್ಳದ ಸಂಕ, ಕೋನಳ್ಳಿಯಿಂದ ಕಡತೋಕಕ್ಕೆ ಹೋಗುವಾಗಿನ ಸಂಕಗಳ ನೆನಪಾದರೆ ಮೈ ಜುಮ್ ಎನ್ನುತ್ತದೆ. ಮತ್ತೆ ಸಂಕ ಹಾಯುವಾಗ ಕೆಳಗೆ ನೋಡಬಾರದು. ರಭಸದಿಂದ ಹರಿಯುವ ನೀರು ನೋಡುತ್ತಿದ್ದರೆ ತಲೆ ತಿರುಗುತ್ತದೆ. ಆಷಾಢ ಮಾಸವೆಂದರೆ ಸುಲಭವಲ್ಲ. ಹೀಗೆ ಅಂತರಾಟಿಗೆಯ ಮೇಲೆ ಜೀವನ.

ಕರೆಂಟ್‌ನ ಕಥೆಯನ್ನಂತೂ ಕೇಳುವುದೇ ಬೇಡ. ಕರೆಂಟು ಇದ್ದ ಮನೆಗಳು ಕಡಿಮೆಯೇ. ಇದ್ದವುಗಳಲ್ಲಿಯೂ ಸುಮಾರಾಗಿ ಆಷಾಢದಲ್ಲಿ ಕರೆಂಟ್ ಇರುತ್ತಲೇ ಇರಲಿಲ್ಲ. ಈಗಲೂ ಹೆಚ್ಚು ಕಡಿಮೆ ಇರುವುದಿಲ್ಲ. ಕಂಬಗಳು ಬಿದ್ದುಹೋಗಿ, ಟ್ರಾನ್ಸ್‌ಫಾರ್ಮರ್ ಸುಟ್ಟುಹೋಗಿ ವಾರಗಟ್ಟಲೆ ಕರೆಂಟ್ ಹೋಗಿಯೇ ಬಿಡುತ್ತದೆ. ಕರೆಂಟ್ ಇಲ್ಲವೆಂದರೆ ಬೆಳಕಿಗೆ ಚಿಮಿಣಿ ಬುರುಡೆ ಅಥವಾ ಲಾಟೀನು. ಅವು ಹೆಚ್ಚೆಂದರೆ ಎರಡು ಅಡಿ ದೂರದವರೆಗೆ ಮಸುಕು ಬೆಳಕು ಚೆಲ್ಲುತ್ತವೆ. ಚಿಮಿಣಿ ಬುರುಡೆ ಗಾಳಿ ಬಂದಂತೆ ನಂದಿಹೋಗುತ್ತಿತ್ತು. ಮತ್ತೆ ಹಚ್ಚುವುದು ಸುಲಭವೇನಲ್ಲ. ಕಡ್ಡಿ ಪೆಟ್ಟಿಗೆ ತಂಡಿ ಹಿಡಿದುಹೋಗಿ ಹತ್ತಿಕೊಳ್ಳುತ್ತಲೇ ಇರಲಿಲ್ಲ. ಒಲೆಗೆ ಹೋಗಿ ಹತ್ತಿಸಿಕೊಂಡು ಬರಬೇಕು. ಬೆಂಕಿ ಉರಿಯುತ್ತಿರದಿದ್ದರೆ ಊದಿ ಬೆಂಕಿ ಉರಿಸಿ ಹಚ್ಚಿಕೊಂಡು ಬರಬೇಕು. ಅದನ್ನು ಒಂದು ಕೈಯಲ್ಲಿ ಹಿಡಿದುಕೊಂಡೇ ಮನೆಯೊಳಗೆ ಅಡ್ಡಾಡುವುದು. ಬುರುಡೆಯನ್ನೂ ಬಹಳ ಹೊತ್ತು ಉರಿಸುವಂತಿಲ್ಲ. ಏಕೆಂದರೆ ಎಣ್ಣೆ ಇಲ್ಲ. ಚಿಮಿಣಿ ಎಣ್ಣೆ ಸಿಗುವುದು

*PAGE DONATED BY : **SHRI CHIDANANDA BHAGWAT IN MEMORY OF HIS FATHER LATE KRISHNA T. BHAGWAT***

ರೇಶನ್‌ನಲ್ಲಿ ಮಾತ್ರ. ತಿಂಗಳಿಗೆ ಒಂದೋ ಎರಡೋ ಲೀಟರ್. ಬೇರೆ ಅಂಗಡಿಗಳಿಗೆ ಮಾರುವ ಅನುಮತಿ ಇರಲಿಲ್ಲ. ಸರಕಾರದ ಕಣ್ಣು ತಪ್ಪಿಸಿ ಬಂದ ಕಳ್ಳ ಚಿಮಿಣಿ ಎಣ್ಣೆ ಸಿಗುವುದು ಗುಟ್ಟಾಗಿ ಮಾತ್ರ. ಎಣ್ಣೆ ಉಳಿಸುವುದಕ್ಕೆ ಇರುವ ಉಪಾಯ ಒಂದೇ. ಬೇಗ ಬುರುಡೆ ಆರಿಸಿ ಮಲಗಿಬಿಡುವುದು. ಹಾಗಾಗಿ ಎಂಟು ಗಂಟೆಯೆಂದರೆ ಮಧ್ಯರಾತ್ರಿ. ಶಾಲೆ ಮಕ್ಕಳಿಗೆ ಹಗಲು ಹೊತ್ತಿಗೇ ಓದಿಕೊಳ್ಳಲು ಹೇಳುತ್ತಿದ್ದರು. ರಾತ್ರಿಯೆಂದರೆ ಕರಿಗತ್ತಲೆ, ವಿಚಿತ್ರ ಮೌನ ಮತ್ತು ಧಾರಾಕಾರ ಮಳೆ.

ಮಳೆ ಮತ್ತು ಕತ್ತಲೆಯೆಂದರೆ ಹುಳಹುಪ್ಪಡಿಗೆ, ಕೀಟಗಳಿಗೆ ಸ್ವರ್ಗ. ಚೋರಟೆಗಳು, ಸುಂಗು ಹುಳು ಈಗ ಮನೆಯೊಳಗೆ ನಿರಂತರವಾಗಿ, ನಿರಾತಂಕವಾಗಿ ಓಡಾಡಿಕೊಂಡಿರುತ್ತವೆ. ಟ್ರೇನುಗಳ ಚಕ್ರಗಳ ಹಾಗೆ ಚೋರಟೆಗೆ ಸಾವಿರಾರು ಕಾಲುಗಳು. ಎರಡೂ ಕಡೆ ಚಲಿಸಲೂ ಇವಕ್ಕೆ ಬರುತ್ತದೆ. ಹಿಂದೆ ತಟ್ಟಿದರೆ ಮುಂದೆ, ಮುಂದೆ ತಟ್ಟಿದರೆ ಹಿಂದೆ, ಚೋರಟೆ ಕೈಗೆ ಮೈಗೆ ತಿಕ್ಕಿ ಹೋದರೆ ಅಥವಾ ಕಾಲ ಕೆಳಗೆ ಸಿಕ್ಕಿ ಜಜ್ಜಿಹೋದರೆ ಅಂಟು-ಅಂಟು ಮತ್ತು ವಾಸನೆ, ಸುಂಗು ಹುಳ ತಾಗಿದಲ್ಲೆಲ್ಲ ಕೆಟ್ಟ ತುರಿಕೆ, ಧಡಸಲೆ. ಹಣ್ಣಡಕೆ ಪಡಚುಳ ಮತ್ತು ಚೇಳು ಬರುವುದು ಸಾಮಾನ್ಯವೇ. ಒಮ್ಮೊಮ್ಮೆ ಹಾವಿನ ಮರಿಗಳೂ ಬಂದು ಬಿಡುತ್ತವೆ. ಹಾಗೆಯೇ ಮನೆತುಂಬ ಈಗ ಬಗೆಬಗೆಯ ಸೆಟ್ಟಿಗಳು, ಮಿಡತೆಗಳು ಮತ್ತು (ಜೆ.ಸಿ.ಬಿಗಳ ಹಾಗೆ ಕಾಣುವ) ಯಂಟಣ್ಣಗಳು. ಹಸಿರು, ಹಳದಿ, ಕೆಂಪು, ಕಪ್ಪು ಬಣ್ಣಗಳ ಬಟ್ಟೆ ಧರಿಸಿದಂತೆ ಕಾಣುತ್ತಿದ್ದ ಯಂಟಣ್ಣಗಳದೊಂದು ಅದ್ಭುತ ಜೀವಜಾತಿ. ಮತ್ತೆ ಈಗ ಎಲ್ಲೆಲ್ಲೂ ಬಿಳಿ, ಹಸಿರು, ಹಳದಿ, ಕಪ್ಪು ಬಣ್ಣದ ಚಿಕ್ಕಚಿಕ್ಕ ಕಪ್ಪೆಮರಿಗಳ ಗೋಲೆ, ಕಪ್ಪೆಗಳನ್ನು ಕೈಯಲ್ಲಿ ಹಿಡಿಯಲು ಹೋದರೆ ಅವು ಉಚ್ಚೆ ಹಾರಿಸಿ ಬಿಡುತ್ತವೆ (ತಾಗಿದಲ್ಲಿ ಚಮಕಲು ಬರುತ್ತದೆ ಎನ್ನುವ ನಂಬಿಕೆ ಇದೆ). ನೂರಾ ಎಂಟು ರೀತಿಯ ಇರುವೆಗಳಿಗೂ ಈಗ ಹಬ್ಬ. ಎಲ್ಲಿ ನೋಡಿದರಲ್ಲಿ ಮಳ್ಳಯರ, ಕಟ್ಟೆಯರ, ದುಡ್ಡಿನಯರ, ಮುಡುಗ, ಗೋವಿಂದಯರ, ಜಾಲ. ಹಸೆ, ಚಾಪೆ, ಚಾದರ, ಬೆಲ್ಲದ ಕೊಡ ಎಲ್ಲ ಕಡೆ ಈ ಹುಳುಗಳು. ಬೆಲ್ಲದ ಕೊಡದೊಳಗೆ ಇರುವೆ ಮತ್ತು ಜಿರಲೆಗಳ ರಾಶಿ. ಅವನ್ನು ತೆಗೆದು ಹಾಕಿ ಬೆಲ್ಲ ತಿನ್ನುವುದು. ಮತ್ತೇನು? ಈ ಹುಳುಗಳಿಗೆ ಹೆದರಿ ಇಡೀ ಬೆಲ್ಲದ ಕೊಡ ಚೆಲ್ಲಲಿಕ್ಕೆ ಆಗುತ್ತದೆಯೇ.

ಜಂತಿ, ಪಕಾಸಿ ಹೀಗೆ ಕಟ್ಟಿಗೆಯ ಸಾಮಗ್ರಿಗಳೊಳಗೆ ಹೊಡೆದುಕೊಂಡ ತೂತುಗಳಲ್ಲಿ ಕೀಟಗಳ ಬಿಡಾರ. ಕಣ್ಣಿಗೆ ಬಿದ್ದೇ ಬಿಡುತ್ತವೆ ಎಂದು ಹೇಳಲಾಗುವುದಿಲ್ಲ. ಚಿತ್ರ ವಿಚಿತ್ರ ಶಬ್ದಗಳಲ್ಲಿ ದಿನವಿಡೀ ಕೂಗುತ್ತಲೇ ಇರುತ್ತವೆ. ಕಿವಿ ತೂತು ಮಾಡುವಂತಹ ತೀವ್ರತೆಯ ಶಬ್ದ ಅದು. ಅವುಗಳಿಗೆ ದೇವರು ಅಷ್ಟು ದೊಡ್ಡ ದೊಡ್ಡ ಸ್ವರ ಏಕೆ ಕೊಟ್ಟಿದ್ದಾನೋ ಅವನಿಗೇ ಗೊತ್ತು. ಜೋರಾಗಿ ಮಳೆ ಬಂದು ನಿಂತ ನಂತರ ಕಪ್ಪೆಗಳ ಆರ್ಭಟ ಆರಂಭವಾಗುತ್ತದೆ. ಅವು ಎಂತಹ ಗೌಜು ಹೊಡೆಯುತ್ತವೆ ಎನ್ನುವುದನ್ನು ನೋಡಿಯೇ ಅನುಭವಿಸಬೇಕು.

ಆಷಾಢ ಮಾಸ ಬಡತನ ಮತ್ತು ಹಸಿವಿನ ರೂಪಕ. ಆಷಾಢ ಮಾಸದಲ್ಲಿ ಹಸಿವೂ ಹೆಚ್ಚು. ದೊಡ್ಡ ಚರಿಗೆಯಲ್ಲೇ ಅನ್ನ ಮಾಡಬೇಕು. ದೊಡ್ಡ ತಪ್ಪಲೆಯಲ್ಲಿ ಹುಳಿ. ಅಂದು ಹೆಚ್ಚಿನ ಮನೆಗಳಲ್ಲಿ ತೀವ್ರ ಬಡತನವಿತ್ತು. ಇಂದಿನ ಜನ ಊಹಿಸಲೂ ಕೂಡ ಸಾಧ್ಯವಿಲ್ಲದ ರೀತಿಯ ಬಡತನ. ಹಿಂದಿನ ವರ್ಷದ ಅಡಿಕೆ ಬೇಸಿಗೆಯಲ್ಲೇ ಕೊಟ್ಟು ಹೋಗಿರುತ್ತಿತ್ತು. ಹೊಸ ಅಡಿಕೆ ಬಂದಿಲ್ಲ. ಮನೆಗಳಲ್ಲಿ ಆರು ಎಂಟು ಮಕ್ಕಳು. ಊಟಕ್ಕೆ ಇಲ್ಲ. ಬಾಳೆಕಾಯಿ ಪಲ್ಯತಿಂದು ಬದುಕಬೇಕು. ಒಂದು ಕೊಳಗ ಅಕ್ಕಿ ಕಡ ತಂದರೆ ಎಷ್ಟು ದಿನ ಬರುತ್ತದೆ? ಕೆಲಸದವರ ಪರಿಸ್ಥಿತಿಯಂತೂ ಯಾರಿಗೂ ಬೇಡ. ದುಡಿಯಲು ಕೆಲಸವೂ ಇಲ್ಲ. ಆಗ ಕನ್ನಡ ಶಾಲೆಗಳಲ್ಲಿ ಕೊಡುತ್ತಿದ್ದ ಹುಳು ಹಿಡಿದ, ಅಮೇರಿಕದ ಗೋಧಿಯ ಉಪ್ಪಿಟ್ಟಿಗಾಗಿ ಜನ ಶಾಲೆಗಳ ಮುಂದೆ ಕಾಯುತ್ತಿದ್ದುದು ನೆನಪಿದೆ. ಬಟ್ಟೆ ಇರುವುದು ಒಂದೋ ಎರಡೋ. ಕಚ್ಚೆ ಅಥವಾ ಸೀರೆಯ ತುಂಡು. ಮೈ ಒರೆಸಿಕೊಳ್ಳಲು ಬಟ್ಟೆ ಇರದೆ, ಬಾಳೆ ಮರದ ಮರೆಗೆ ಹೋಗಿ ಕುಳಿತು, ಉಟ್ಟ ಕಚ್ಚೆಯನ್ನೇ ಬಿಚ್ಚಿ ಒರೆಸಿಕೊಂಡು ಮತ್ತೆ ಅದೇ ಒದ್ದೆ ಕಚ್ಚೆಯನ್ನೇ ಉಟ್ಟುಕೊಳ್ಳುತ್ತಿದ್ದುದನ್ನು ನೋಡಿದ್ದೇನೆ. ಸೂಡಲು, ಹಾಸಲು, ಹೊದೆಯಲು ಒಂದೇ ಕಂಬಳಿ. ಹೆಂಗಸರ ದುರಂತ ಕಥೆಗಳನ್ನು ಹೇಳುವುದು ಬೇಡ. ಆಷಾಢ ಮಾಸ ಮಳೆಯಲ್ಲಿ ಬೆರೆತ ಕಣ್ಣೀರು ಹಳ್ಳವಾಗುವ ತಿಂಗಳು ಕೂಡ ಹೌದು. ○

## "THREAD CHANGING CEREMONY"

Yajur Upakarma will be organised for the benifit of Havyaka Community Members at "Dombivli Medical Centre" on 11th August, 2022 Thursday between 7.00 AM to 8.30 AM. All Dombivli and surrounding area Havyaka residents are requested to note and take advantage of the opportunity. (Threads will be provided by organizer/ please bring Tatte, Huttu, Batlu Madi so that necessary arrangements can be made)

***For details and registration Please Contact :***
**Dombivli Medical Center Land line No. 0251-2487291, Shivanand Bhat M. No. 8850275360**

UIL

UGRU INDUSTRIES

*With Best Compliments from*

UGRU INDUSTRIES

**Manufacturers of Speciality food products**

Industrial Estate, Kumta,
North Kanara District, Karnataka

Plot Q1 & 2, Industrial Estate,
Hegde Road, Kumta, North Kanara District,
Karnataka - 581343, India.
Tel. & Fax : 08386-223-832
E-mail: ugruind@yahoo.co.in

***ADVT.***

# HAVYAKA WELFARE TRUST, MUMBAI

# Annual General Body Meeting & Cultural Programmes

**DATE : 28-8-2022, Sunday • TIME : 09.30 a.m. onwards**

**Venue : Havyakara Sabhagraha,** Dipti Solitaire, 4th Floor, M. G. Road & L.B.S. Marg Junction, Opp. Old Post Office, Ghatkopar (W), Mumbai - 400 086.

**PROGRAMME SCHEDULE :**

| | | |
|---|---|---|
| Registration and Breakfast | : | 09.30 a.m. to 10.00 a.m. |
| Cooking Competition | : | Main ingredient - Beaten Rice (Poha) Sweet and Khara Items |
| Antakshari Competition | : | 10.00 a.m. to 12.30 p.m. |
| Havyaka Hasya Raja / Rani stand up comedy competition | : | 12.30 p.m. to 01.30 p.m. |
| Lunch Break | : | 01.30 p.m. to 2.30 p.m. |
| Annual General Body Meeting and Prize Distribution | : | 02.30 p.m. to 5.30. p.m. |

**Antakshari Competition - Kannada and Hindi songs Antakshari.**
**Rounds and Rules will be explained on the spot**
**Participants with a group of 4.**
**Antakshari will be conducted by - Shri Chandrashekhar Joshi & Smt. Aparna Bhat**

**Stand up Comedy Competition - Solo performance (Kannada / Hindi)**
**Time limit - 7 mins. for each participant.**
**Winner will be crowned with Havyaka Hasya Raja / Rani Title**

**Cooking Competition - Items should be displayed before 10-00 a. m. at the venue.**

**Each Competition has attractive prizes.**

**Please enroll your name before 15th August, 2022.**

***CONTACT :***

| | | |
|---|---|---|
| **Amita Bhagwat** | - | **9819324284** |
| **Shashikala Hegde** | - | **9869015917** |
| **Tanuja Hegde** | - | **9869431749** |
| **G. V. Hegde** | - | **9167434626 / 022-26652591** |

**Shri Shivkumar Bhagwat**
President HWT

**Shri Narayan Akadas**
Secretary HWT

*PAGE DONATED BY : **SMT. GANGA P. BHAGWAT PRABHADEVI IN MEMORY OF LATE SHRI P. R. BHAGWAT***

# ಸಂಕ್ಷಿಪ್ತ ಸುದ್ದಿಗಳು

**ಮಯೂರ ವರ್ಮ ಪ್ರತಿಷ್ಠಾನ ಮುಂಬಯಿ : ವಿಚಾರಮಂಥನ ಕಾರ್ಯಕ್ರಮ**
**ಸ್ವಾತಂತ್ರ್ಯದ ಜವಾಬ್ದಾರಿ ಎಲ್ಲರೂ ಅರಿಯುವಂತಾಗಲಿ : ಅಶೋಕ್ ಪಕ್ಕಳ**

ನಮ್ಮ ದೇಶ ನಮಗೆ ಬಹಳಷ್ಟನ್ನು ಕೊಟ್ಟಿದೆ. ಅದನ್ನು ಉಳಿಸಿ ಬೆಳೆಸಿ ಮುಂದಿನ ಜನಾಂಗಕ್ಕೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿದೆ. ಹಿಂದೆ ಅರಿವೆ ಕಡಿಮೆ ಇದ್ದರೂ ಅರಿವು ಸಾಕಷ್ಟಿತ್ತು. ಹಾಗಾಗಿ ಹರಿದ ಬಟ್ಟೆಯನ್ನು ಹೊಲಿದು ಧರಿಸುತ್ತಿದ್ದೆವು. ಈಗ ಪರಿಸ್ಥಿತಿ ಬದಲಾಗಿದೆ. ಹರಿದ ಬಟ್ಟೆಯನ್ನೇ ಇಷ್ಟಪಡುತ್ತೇವೆ. ಅದಕ್ಕೆ ನಮ್ಮ ಚಿಂತನಾ ಲಹರಿ ಬದಲಾದದ್ದೇ ಕಾರಣ. ಅರಿವು ಇಲ್ಲದಿದ್ದರೆ ಅರಿವೆ ಎಷ್ಟಿದ್ದರೂ ಪ್ರಯೋಜನವಿಲ್ಲ. ಇಂತಹ ಕಾಲಘಟ್ಟದಲ್ಲಿ ಸ್ವಾತಂತ್ರ್ಯದ ಇತಿಮಿತಿ ಲಕ್ಷ್ಮಣರೇಖೆ ಮೀರಿ ನಡೆಯುತ್ತಿದ್ದೇವೆ ಎಂದು ಬಂಟರವಾಣಿ ಮಾಸಿಕದ ಗೌರವ ಪ್ರಧಾನ ಸಂಪಾದಕ ಅಶೋಕ್ ಪಕ್ಕಳ ತಿಳಿಸಿದರು.

ಮಯೂರ ವರ್ಮ ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ನೆರೂಲ್ ಶನೀಶ್ವರ ದೇವಾಲಯದ ಸಹಕಾರದೊಂದಿಗೆ ಜು. 10ರಂದು ಸಂಜೆ ನೆರೂಲ್‌ನ ಶ್ರೀ ಶನೀಶ್ವರ ಮಂದಿರದ ಸಭಾಗೃಹದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ನಿಮಿತ್ತ ಆಯೋಜಿಸಲಾಗಿದ್ದ 'ಸ್ವಾತಂತ್ರ್ಯ ಹಾಗೂ ಜವಾಬ್ದಾರಿ' ವಿಚಾರ ಮಂಥನ ಕಾರ್ಯಕ್ರಮದಲ್ಲಿ ಸಮನ್ವಯಕರಾಗಿ ಅವರು ಮಾತನಾಡಿದರು. 'ನನ್ನ ದೇಹದ ಬೂದಿ ಹೋಗಿ ಬೀಳಲಿ ಭತ್ತ ಬೆಳೆಯುವ ಹೊಲಕ್ಕೆ' ಎಂಬ ದಿನಕರ ದೇಸಾಯಿಯವರ ಆಶಯ ಮತ್ತೊಮ್ಮೆ ಮೊಳಗಲಿ ಎಂದರು. ನೆರೂಲ್ ಶ್ರೀ ಶನೀಶ್ವರ ಮಂದಿರದ ಧರ್ಮದರ್ಶಿ ರಮೇಶ್ ಎಂ. ಪೂಜಾರಿ ಅವರ ಅಧ್ಯಕ್ಷತೆಯಲ್ಲಿ ಜರುಗಿದ ಕಾರ್ಯಕ್ರಮದಲ್ಲಿ ಕನ್ನಡ ಕಲಾಕೇಂದ್ರದ ಅಧ್ಯಕ್ಷ ಟಿ. ಆರ್. ಮಧುಸೂದನ್, ಲಕ್ಷ್ಮೀಶ ಗಬ್ಲಡ್ಕ ಸುಳ್ಯ, ಮೈಸೂರು ಅಸೋಸಿಯೇಶನ್ ನೇಸರು ಮಾಸಿಕದ ಸಂಪಾದಕಿ ಡಾ। ಜ್ಯೋತಿ ಸತೀಶ್ ಉಪನ್ಯಾಸ ನೀಡಿದರು.

ಕನ್ನಡ ಕಲಾಕೇಂದ್ರದ ಅಧ್ಯಕ್ಷ ಟಿ. ಆರ್. ಮಧುಸೂದನ್ ಮಾತನಾಡಿ, ಸಾಂಸ್ಕೃತಿಕ ಸಂಘ ಸಂಸ್ಥೆ ಕಟ್ಟಿ ಬೆಳೆಸುವುದು ನಮ್ಮ ಜವಾಬ್ದಾರಿಯಾಗಿದೆ. ನಮ್ಮ ದೇಶದಲ್ಲಿ ಸಾಂಸ್ಕೃತಿಕ, ಜಾನಪದ ಸಂಪತ್ತು ಸಾಕಷ್ಟಿದೆ. ಅದನ್ನು ತಲೆಮಾರಿನಿಂದ ತಲೆಮಾರಿಗೆ ಹಸ್ತಾಂತರ ಮಾಡಬೇಕಾದರೆ ಸಾಂಸ್ಕೃತಿಕ ಸಂಘ ಸಂಸ್ಥೆಗಳ ಪಾತ್ರ ಸಾಕಷ್ಟಿದೆ ಎಂದರು. ಡಾ। ಜ್ಯೋತಿ ಸತೀಶ್ ಮಾತನಾಡುತ್ತ ಪುರುಷರು ಮಹಿಳೆಯರನ್ನು ನೋಡುವ ದೃಷ್ಟಿ ಬದಲಾದಾಗ ಮಾತ್ರ ಮಹಿಳೆಯರ ಮೇಲಿನ ದೌರ್ಜನ್ಯ ಕಡಿಮೆಯಾಗುತ್ತದೆ. ಮಹಿಳೆಯರಿಗೆ ಅನುಕಂಪದ ನೆಲೆಯಲ್ಲಿ ಮೀಸಲಾತಿಯ ಅಗತ್ಯವಿಲ್ಲ. ಮಕ್ಕಳಿಗೆ ಭಗವದ್ಗೀತೆಯ ಮಹತ್ವ ತಿಳಿಸಬೇಕು. ಎಳವೆಯಲ್ಲೇ ಸಂಸ್ಕೃತಿಯ ಅರಿವು ಮೂಡಿಸಬೇಕು. ಮಕ್ಕಳಿಗೆ ನಮ್ಮ ಸಂಸ್ಕೃತಿ, ಇತಿಹಾಸ, ಸಂವಿಧಾನದ ಹಕ್ಕು, ಕರ್ತವ್ಯಗಳ ಬಗ್ಗೆ ತಿಳಿಯಪಡಿಸುವ ಅಗತ್ಯವನ್ನು ಪಾಲಕರು ಅರಿತಿರಬೇಕು.

## ELECTION NOTICE

I have been nominated as Hon. Returning Officer and authorised to conduct the election of seven members to the Managing Committee for a term of two years for the term of 2022-2023 & 2023-2024 vacancies caused by retirement of six members viz. Shri Shivkumar P. Bhagwat, Shri Sanjay Bhat, Shri R. N. Kameshwar, Shri A. K. Bhat, Shri N. K.Hegde & Smt. Tanuja Hegde. However, they are eligible for re-election. The details are as follows -

1. Receiving the duly completed nomination forms upto 4.00 pm on 22nd August, 2022 at Havyaka Welfare Trust, Kalina Office.
2. Receiving written request of withdrawal latest by 4.00 pm on 24th August, 2022 at HWT Office, Kalina.
3. Scrutiny of nomination forms, preparing the final list of candidates and displaying the same on the Notice Board of Havyaka Office, Kalina on 26th August, 2022.
4. Election to be held, if required, during the Annual General Body Meeting on 28th August, 2022. Decision of the Hon. Returning Officer shall be final.
5. Declaration of Result of Election.
6. For the smooth conduct of the Election, the Returning Officer may take assistance / help of the volunteers.
7. Members are earnestly requested to co-operate in all the respects.
8. Nomination Forms are available at Kalina and Dombivli offices during office hours upto 4 pm. (Mon. - Sat.)

Place : Mumbai
Date : 1st August, 2022

Sd/-
**Shri Prakash Rao**
*Hon. Returning Officer*

*PAGE DONATED BY : **SHRI A. K. BHAT, CHITRIGI & FAMILY***



ಗಣ್ಯರು ದೀಪ ಪ್ರಜ್ವಲಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಸುಪ್ರಿಯಾ ಅನಿಲ್ ಹೆಗ್ಡೆ ಪ್ರಾರ್ಥನೆಗೈದರು. ತಾರಾ ಬಂಗೇರ ಸ್ವಾಗತಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ವಿಶ್ವನಾಥ ದೊಡ್ಮನೆ ಪ್ರತಿಷ್ಠಾನದ ಕುರಿತು ಹಾಗೂ ವಿಚಾರ ಮಂಥನದ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರತಿಷ್ಠಾನದ ಉಪಾಧ್ಯಕ್ಷ ಸಿಂಧೂರ ರಾಕೇಶ್ ಗೌಡ ಅತಿಥಿಗಳನ್ನು ಗೌರವಿಸಿದರು. ಅದ್ಯಪಾಡಿ ಬಾಲಕೃಷ್ಣ ಶೆಟ್ಟಿ ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಅನಘಾ ದೊಡ್ಮನೆ, ಸುದುಘಾ ದೊಡ್ಮನೆ, ಪೃಥ್ವೀಶ್, ಸನಾತನ, ಆದಿತ್ಯ ದೇಶಭಕ್ತಿಗೀತೆ ಹಾಡಿದರು. ದಿಶಾ ಪ್ರಭು, ಸನಾತನ, ಸೂರಜ್ ದಾಮಣ್ಕರ್ ಅವರಿಂದ ಭಾಷಣ ನಡೆಯಿತು. ಶ್ರಾವ್ಯಾ ಶೆಟ್ಟಿ, ಭವಿತ್ ಕೋಟ್ಯಾನ್, ಭೂಮಿಕಾ ಗೌಡ ಬಳಗದಿಂದ ಜಾನಪದ ನೃತ್ಯ, ಶಾಂತಲಕ್ಷ್ಮೀ ಉಡುಪ ಬಳಗದಿಂದ ಅಂಗುಲಿಮಾಲ ಕಿರುನಾಟಕ ಪ್ರದರ್ಶನಗೊಂಡಿತು.

## ಸೇವಾ ಮನೋಭಾವವಿಲ್ಲದೆ, ಹಣವೇ ಎಲ್ಲವೂ ಅಲ್ಲ




ಕೇವಲ ಹಣವೇ ಪ್ರಧಾನ ಎನ್ನುವ ಮನೋಭಾವದ ವೃತ್ತಿ ಸುದೀರ್ಘವಾಗಿರುವುದಕ್ಕೆ ಸಾಧ್ಯವೇ ಇಲ್ಲ. ಸೇವೆಯ ಮನೋಭಾವವೂ ಇದ್ದಾಗ ಮಾತ್ರ ಹೆಸರು, ಗೌರವ ಇರಲಿದೆ ಎಂದು ನಿವೃತ್ತ ಪ್ರಾಚಾರ್ಯ ಅ.ರಾ. ಲಂಬೋದರ ಹೇಳಿದರು. ಸಾಗರ ಪಟ್ಟಣದಲ್ಲಿರುವ ಭಾಗವತ್ ಆಸ್ಪತ್ರೆ, ಗ್ರೀನ್ ಅಂಬಸಿ ಸಭಾಂಗಣದಲ್ಲಿ ಏರ್ಪಡಿಸಿದ್ದ 40ನೇ ವರ್ಷದ ಸಂಭ್ರಮಾಚರಣೆ ಉದ್ಘಾಟನೆ, ಆಸ್ಪತ್ರೆಯ ವೆಬ್‌ಸೈಟ್ ಮತ್ತು ಆ್ಯಪ್ ಲೋಕಾರ್ಪಣೆ ನೆರವೇರಿಸಿ ನಂತರ ಅವರು ಮಾತನಾಡಿದರು. ಸಾಗರದ ಪ್ರಥಮ ಖಾಸಗಿ ಆಸ್ಪತ್ರೆ ಎನ್ನುವ ಹೆಗ್ಗಳಿಕೆ ಹಾಗೂ ದಿನದ 24 ಗಂಟೆಯೂ ಸೇವೆ ನೀಡಿದ ಕೀರ್ತಿ ಭಾಗವತ್ ಆಸ್ಪತ್ರೆಗೆ ಇದೆ. ಪ್ರಸ್ತುತ ಸಾಮಾಜಿಕವಾದ ಕಾರ್ಯದೊಂದಿಗೆ ಲೋಕಮುಖವಾಗಿ ಜನರಿಗೆ ಸೇವೆ ಸಲ್ಲಿಸುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಡಾ. ಶ್ರೀಯಾ ಭಾಗವತ್ ಜು. 10 ರಿಂದ ಮುಂದಿನ 2 ತಿಂಗಳು ಆಸ್ಪತ್ರೆಯಿಂದ ಕೈಗೊಳ್ಳುತ್ತಿರುವ ಸಮಾಜಮುಖಿ ಕಾರ್ಯಗಳ ವಿವರವನ್ನು ನೀಡಿದರು. ಹಿರಿಯ ವೈದ್ಯ ಡಾ. ರಾಮಚಂದ್ರ ಭಾಗವತ್, ಆಸ್ಪತ್ರೆ ನಡೆದು ಬಂದ ದಾರಿ ಮತ್ತು ಸಹಕರಿಸಿದವರ ನೆನಪು ಮಾಡಿಕೊಂಡರು. ಇದೇ ವೇಳೆ ಅ. ರಾ. ಲಂಬೋದರ್ ಮತ್ತು ಚಂದ್ರಶೇಖರ್‌ರವರನ್ನು ಸನ್ಮಾನಿಸಲಾಯಿತು. ಡಾ. ಕಿಶನ್ ಆರ್. ಭಾಗವತ್, ಡಾ. ನಳಿನಿ ಭಾಗವತ್, ಡಾ. ರಶ್ಮಿ ಹೆಗಡೆ, ಪುಣ್ಯ ಭಾಗವತ್ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ನಂತರ ಮಂಡಿ ಮತ್ತು ಸೊಂಟದ ಕೀಲು ಮರುಜೋಡಣೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿರುವವರಿಗೆ ಫಾಲೋ ಅಪ್ ಕ್ಯಾಂಪ್ ನಡೆಯಿತು.

## ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ : ವಾರ್ಷಿಕ ಮಹಾಸಭೆ




ಕನ್ನಡಿಗ ಪತ್ರಕರ್ತರ ಸಂಘ ಮಹಾರಾಷ್ಟ್ರ ಇದರ 14ನೇ ವಾರ್ಷಿಕ ಮಹಾಸಭೆ ಜು. 10ರಂದು ಅಂಧೇರಿ ಪೂರ್ವದ ಸಾಲೀಟರಿ ಕಾರ್ಪೋರೇಟ್ ಪಾರ್ಕ್ ಇದರ ಕ್ಲಬ್ ಹೌಸ್‌ನ ಸಭಾಗೃಹದಲ್ಲಿ ನಡೆಯಿತು. ಸಂಘದ ಅಧ್ಯಕ್ಷ ರೋನ್ಸ್ ಬಂಟ್ವಾಳ್ ಅಧ್ಯಕ್ಷತೆ ವಹಿಸಿದ್ದರು. ಉಪಾಧ್ಯಕ್ಷ ರಂಗ ಎಸ್. ಪೂಜಾರಿ ಸ್ವಾಗತಿಸಿದರು. ಗೌರವ ಕಾರ್ಯದರ್ಶಿ ರವೀಂದ್ರ ಶೆಟ್ಟಿ ತಾಳಿಪಾಡಿ ಗತ ವಾರ್ಷಿಕ ಮಹಾಸಭೆ ವರದಿ ವಾಚಿಸಿದರು. ಗೌರವ ಕೋಶಾಧಿಕಾರಿ ನಾಗೇಶ್ ಪೂಜಾರಿ ಏಳಿಂಜೆ ಗತ ವಾರ್ಷಿಕ ಲೆಕ್ಕಪತ್ರ ಮಂಡಿಸಿದರು. ಪತ್ರಕರ್ತರ ಭವನ ಸಮಿತಿಯ ಕಾರ್ಯಾಧ್ಯಕ್ಷ ಡಾ। ಶಿವ ಮೂಡಿಗೆರೆ ಸಂಘದ ಮುಂದಿನ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ನೂತನ ಸಾಲಿನ ಲೆಕ್ಕ ಪರಿಶೋಧಕರನ್ನಾಗಿ ಪ್ರತಿಷ್ಠಿತ ಚಾರ್ಟರ್ಡ್ ಅಕೌಂಟೆಂಟ್ ಸಿಎ ಐ.ಆರ್. ಶೆಟ್ಟಿ ಆ್ಯಂಡ್ ಕಂಪೆನಿ ಸಂಸ್ಥೆಯನ್ನೇ ಪುನರಾಯ್ಕೆಗೊಳಿಸಲಾಯಿತು. ಸದಸ್ಯರ ಪರವಾಗಿ ಡಾ। ಆರ್.ಕೆ. ಶೆಟ್ಟಿ, ನಿತ್ಯಾನಂದ ಡಿ. ಕೋಟ್ಯಾನ್, ಸದಾಶಿವ ಎ. ಕರ್ಕೇರ ಮಾತನಾಡಿದರು. ಗತ ಸಾಲಿನಲ್ಲಿ ಅಗಲಿದ ಎಲ್ಲಾ ಪತ್ರಕರ್ತರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಜತೆ ಕೋಶಾಧಿಕಾರಿ ಡಾ। ಜಿ.ಪಿ. ಕುಸುಮಾ ವಂದಿಸಿದರು.

*PAGE DONATED BY :* ***SMT. SHANTA V. HEGDE, CARMICHAEL ROAD***

'Havyaka Sandesha' Aug 2022

*RNI NO. MAHBIL / 2000 / 746,*
*Postal R.NO. MCN/161/2021-2023*
*WPP License No. MR / Tech / WPP-130 / North / 2021-2023*
*'Licence to post without prepayment'*

| *Posted at Mumbai Patrika Channel Stg. Office Mumbai - 400 001*<br>Date of Publication : 1st of every month    REGISTERED NEWSPAPER | Date of Posting :<br>2nd, 3rd of every month |
|---|---|
| *If undelivered, please return to :*<br>**HAVYAKA WELFARE TRUST**<br>B-207, Valmiki Apts., Near Pharmacy College,<br>Sundar Nagar, Kalina, Vidyanagari P. O.,<br>Mumbai - 400 098. ✆ 2665 2591<br>**E-mail : havyakamumbai@hotmail.com**<br>**Visit : www.havyakamumbai.com**<br><br>Published by Narayan Akadas R.<br>for Havyaka Welfare Trust, Mumbai - 400 098.<br>being printed at M/s. Navin Printers, Mumbai - 400 016.<br>Hon. Editor : **Smt. Amita S. Bhagwat** | To, |




## ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಆಶಿಷ್ ಸಾಧನೆ

ಉತ್ತರ ಕನ್ನಡ ಜಿಲ್ಲೆ ಕುಮಟಾ ತಾಲೂಕಿನ ಕಡೇಕೋಡಿ ಮೂಲದ **ಆಶಿಷ್ ಭಾಗ್ವತ್** 2021-22ನೆಯ ಸಾಲಿನ ಸಿಬಿಎಸ್‌ಸಿ ಪರೀಕ್ಷೆಯಲ್ಲಿ ಶೇ. 98.6 ಅಂಕ ಗಳಿಸಿ ಸಾಧನೆ ಮಾಡಿದ್ದಾನೆ. ನವಿ ಮುಂಬಯಿಯ ಬಾಲ ಭಾರತಿ ಪಬ್ಲಿಕ್ ಸ್ಕೂಲ್‌ನ ವಿದ್ಯಾರ್ಥಿಯಾಗಿದ್ದು, ಚಿದಾನಂದ ಭಾಗ್ವತ್ ಹಾಗೂ ಕಲಾ ಭಾಗ್ವತ್ ದಂಪತಿಯ ಪುತ್ರನಾಗಿದ್ದಾನೆ. ಶಾಲಾ ದಿನಗಳಲ್ಲಿ ಮಹಾರಾಷ್ಟ್ರ ರಾಜ್ಯ ಮಟ್ಟದ ವಾಲಿಬಾಲ್ ಕ್ರೀಡೆಯಲ್ಲಿ ಹಾಗೂ ತಬಲಾ ವಾದನದಲ್ಲೂ ಆಶಿಷ್ ಸಾಧನೆ ಮಾಡಿದ್ದಾನೆ.



## ಕುಮಾರಿ ದ್ರವ್ಯಾ ಹೆಗಡೆ ಸಾಧನೆ

ಮರು ತಪಾಸಣೆಯ ನಂತರ 616/625 ಅಂಕಗಳನ್ನು ಪಡೆದ **ಕುಮಾರಿ ದ್ರವ್ಯಾ ಹೆಗಡೆ,** ಎಪ್ರಿಲ್ 2022ರಲ್ಲಿ ಜರುಗಿದ ಕರ್ನಾಟಕದ ಎಸ್.ಎಸ್.ಎಲ್.ಸಿ. ಬೋರ್ಡ್ ಪರೀಕ್ಷೆಯಲ್ಲಿ 10ನೆಯ ರ್‍ಯಾಂಕ್ ಪಡೆದಿರುತ್ತಾಳೆ. ಅವಳು ಶ್ರೀಮತಿ ರೇಣುಕಾ ಹಾಗೂ ಶ್ರೀ ನೋಬಿನ್ ಹೆಗಡೆ, ಹೊಲನಗದ್ದೆ ಇವರ ಸುಪುತ್ರಿ.

**ಸಾಧನೆಗೈದ ಮಕ್ಕಳನ್ನು ಅಭಿನಂದಿಸುತ್ತೇವೆ ಹಾಗೂ ಅವರಿಗೆ ಉಜ್ವಲ ಭವಿಷ್ಯವನ್ನು ಕೋರುತ್ತೇವೆ.**